ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

# ತಪೋವಾಣಿ

ಸಂಪುಟ 14 ಸಂಚಿಕೆ 7 | ಜುಲೈ 2017 | ರೂ.25

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪ**

**(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಜುಲೈ 2012ರ ಸಂಚಿಕೆ)**

ಇದು ಆಷಾಢ ಮಾಸ, ಈ ಮಾಸದಲ್ಲಿ ಶ್ರೇಷ್ಠ ಚೈತನ್ಯಗಳು ಅತ್ಯುನ್ನತ ಮೂಲದಿಂದ ಭೂಮಿಗೆ ನೇರವಾಗಿ ಬರುತ್ತವೆ. ಪುರಾತನ ಋಷಿಗಳಿಗೆ ಇದರ ಅರಿವಿತ್ತು, ಅವರು ಎಲ್ಲರಿಗೂ ಲೌಕಿಕ ಚಟುವಟಿಕೆಗಳಿಗಿಂತ ಪಾರಮಾರ್ಥಿಕದಲ್ಲಿ ಹೆಚ್ಚು ಸಮಯ ಕಳೆಯಿರಿ ಎಂದು ಸಲಹೆ ನೀಡುತ್ತಿದ್ದರು. ಆದ್ದರಿಂದಲೇ ಜನರು ಮದುವೆಗಳನ್ನು, ಧಾರ್ಮಿಕ ವಿಧಿಗಳನ್ನು ಮತ್ತು ಎಲ್ಲ ಮುಖ್ಯ ಲೌಕಿಕ ಚಟುವಟಿಕೆಗಳನ್ನು ಮುಂದೂಡಿ ಧ್ಯಾನದಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದರು. ಆದರೆ, ಕಾಲ ಕಳೆದಂತೆ, ಜನರು ಧಾರ್ಮಿಕ ವಿಧಿಗಳನ್ನು ಮುಂದೂಡುವುದರ ಹಿಂದಿನ ಕಾರಣವನ್ನು ಮರೆತು, ಇಡೀ ತಿಂಗಳು ಅಮಂಗಳಕರವೆಂದು ಭಾವಿಸಿದರು. ಈ ತಿಂಗಳ ಪ್ರತಿ ಕ್ಷಣವೂ ಪವಿತ್ರ ಎಂಬುದನ್ನು ಜನರು ಮರೆತರು. ಆದರೆ ನಾವೀಗ ಹೊಸಯುಗವನ್ನು ಪ್ರವೇಶಿಸುತ್ತಿರುವುದರಿಂದ, ಋಷಿಗಳು, ನಾವು ಮರೆತಿರುವ ಮೂಲಕಾರಣವನ್ನು ನೆನಪಿಸುತ್ತ, ಧ್ಯಾನ ಮಾಡಿ, ಮೂಲದಿಂದ ಚೈತನ್ಯಗಳನ್ನು ಪಡೆಯುವುದರಲ್ಲಿ ಹೆಚ್ಚು ಸಮಯ ಕಳೆಯಿರಿ ಎಂದು ಹೇಳುತ್ತಿದ್ದಾರೆ.

ಭಗವಂತನೇ ಗುರು ಹಾಗೂ ಮಾನವ ಗುರುಗಳು ಅವನ ಪ್ರತಿನಿಧಿಗಳು ಮತ್ತು ಆಧ್ಯಾತ್ಮಿಕ ಗೈಡ್‌ಗಳು ಎಂದು ಅಮರರವರು ಹೇಳುತ್ತಿದ್ದರು. ಅಮರರವರಿಂದ ಬಂದ ದಿವ್ಯಜ್ಞಾನವನ್ನು ಮೆಲುಕುಹಾಕುತ್ತಿದ್ದಂತೆ ನನಗೆ ಅವರು ಹೇಳುತ್ತಿದ್ದ ಮಾನವ ಗುರುವಿನ ಪಾತ್ರದ ಲಕ್ಷಣದ ನೆನಪಾಯಿತು. ಅದೇನೆಂದರೆ, ಶಿಷ್ಯರಿಗೆ ನಿಜಗುರುವಾದ ಭಗವಂತನೊಂದಿಗೆ ಸಂಪರ್ಕ ಕಲ್ಪಿಸುವುದು. ಶಿಷ್ಯನಿಗೆ ಅರ್ಥಮಾಡಿಸಿ ಅವನನ್ನು ನಿಜಗುರುವಿನೆಡೆಗೆ ಕರೆದೊಯ್ಯುವುದು. ಶಿಷ್ಯನಿಗೆ ಭಗವಂತನ ಅನುಭವ ದೊರೆಯಲು ನೆರವಾಗುವುದು. ಆತನ ಕರ್ತವ್ಯವೆಂದರೆ, ಭಗವಂತನೆಡೆಗೆ ಹೋಗಲು ಜ್ಞಾನ, ಚೈತನ್ಯ ಮತ್ತು ತಂತ್ರಗಳನ್ನು ಒದಗಿಸುವುದು. ಇನ್ನೊಂದು ಮುಖ್ಯವಾದ ಅಂಶವೆಂದರೆ, ಒಮ್ಮೆ ನಿಜಗುರುವಿನೊಂದಿಗೆ ಶಿಷ್ಯನು ಸಂಪರ್ಕ ಸಾಧಿಸಿದ ಮೇಲೆ, ಗುರುವಿನ ಕೆಲಸ ಮುಗಿದಂತೆ, ಏಕೆಂದರೆ ಆ ಮಟ್ಟದಿಂದ ನಿಜಗುರು ಶಿಷ್ಯನನ್ನು ನೇರವಾಗಿ ನಿರ್ದೇಶಿಸುತ್ತ ಅಂತಿಮ ಶರಣಾಗತಿಯತ್ತ, ಮುಕ್ತಿಯತ್ತ ಕರೆದೊಯ್ಯುತ್ತಾನೆ!

ನನಗೆ ಅಮರರವರ ಮಾತು ನೆನಪಾಗುತ್ತದೆ: ಶಿಷ್ಯನ ಜೀವನದ ಪ್ರತಿ ಸಣ್ಣ ವಿಷಯವನ್ನೂ ನಿಯಂತ್ರಿಸಿ ಸಲಹೆ ಕೊಡುವುದು ಗುರುವಿನ ಕೆಲಸವಲ್ಲ; ಗುರುವಿನ ಕೆಲಸವೆಂದರೆ ಶಿಷ್ಯನನ್ನು ಬಲಿಷ್ಠನನ್ನಾಗಿಯೂ ಪರಿಶುದ್ಧನನ್ನಾಗಿಯೂ ಮಾಡುವುದು. ಶಿಷ್ಯನನ್ನು ನಿಯಂತ್ರಿಸಿದರೆ ಅವನು ಗುರುವಿನ ಮಾತುಗಳನ್ನೇ ಅವಲಂಬಿಸಿಕೊಂಡು ಮುಂದಕ್ಕೆ ಹಾರುವುದೇ ಇಲ್ಲ. ಅವನು ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಹಸಕ್ಕೇ ಹೋಗುವುದಿಲ್ಲ. ಅವನು ಸೋಲದಿರಬಹುದು ಆದರೆ ಅಧ್ಯಾತ್ಮ ಪಯಣದ ಅಂತಿಮ ಗುರಿಯಾದ ಮುಕ್ತಿಯನ್ನೆಂದೂ ಹೊಂದಲಾರ. ಸ್ವತಂತ್ರವಾಗಿರದವನು ಶರಣಾಗಲಾರ, ಮುಕ್ತಿ ಹೊಂದಲಾರ. ಸ್ವಾತಂತ್ರ್ಯ ಮತ್ತು ಇಚ್ಛಾಸ್ವಾತಂತ್ರ್ಯದ ಸರಿಯಾದ ಬಳಕೆಯು ದೈನಂದಿನ ಜೀವನದಲ್ಲಿಯೂ ಬಹು ಮುಖ್ಯ. ಕುಂಟನೆಂದೂ ನಡೆಯಲಾರ.

ಗುರುಗಳಾದವರು ತಮ್ಮ ಪಾತ್ರವನ್ನರಿತು ತಮ್ಮ ಶಿಷ್ಯರು ನಡೆಯಲು ಮತ್ತು ಹಾರಲು ನೆರವಾಗುವ ಕಾಲ ಬಂದಿದೆ ಎಂದು ನನಗನಿಸುತ್ತದೆ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ


**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)
ಸಪ್ತರ್ಷಿ ಧ್ಯಾನ ಕೇಂದ್ರ, **ರಾಜರಾಜೇಶ್ವರಿ ಬಡಾವಣೆ**
**ಮಂಗಳವಾರ** (ಮಧ್ಯಾಹ್ನ 11.30 ರಿಂದ 12.30)
ಶ್ರೀ ಮಂಜುನಾಥ ಶಾಸ್ತ್ರಿಯವರ ಮನೆ,
ಗಾಂಧಿ ವೃತ್ತ

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.




**ಗುರೂಜಿಯವರ ಹಳೆಯ ಚಿತ್ರಗಳು ಮತ್ತು ಹಳೆಯ ಊಟದ ಸ್ಥಳ**

### ಸುದ್ದಿ-ಸೂಚನೆ

- ಶಾಲೆಗಳಲ್ಲಿ ಬೇಸಿಗೆ ರಜ ಮುಗಿದ ನಂತರ ಲೈಟ್ ಚಾನಲಿಂಗ್ ಕೆಲಸ ವೇಗವನ್ನು ಪಡೆದಿದೆ. ಸಾವಿರಕ್ಕೂ ಹೆಚ್ಚು ಶಾಲೆಗಳಲ್ಲಿ ತಮ್ಮ ಬೆಳಗಿನ ಪ್ರಾರ್ಥನಾ ಸಮಯದಲ್ಲಿ ಸುಮಾರು ಅರ್ಧ ಮಿಲಿಯನ್ ಮಕ್ಕಳು ನಿಯಮಿತವಾಗಿ ಲೈಟ್ ಚಾನಲ್ ಮಾಡುತ್ತಾರೆ.
- ನಿಯತಕಾಲದಲ್ಲಿ ನಡೆಯುವ ಆಧ್ಯಾತ್ಮಿಕ ಮಾರ್ಗದರ್ಶನ ಅಥವ ಚಕ್‌ಅಪ್‌ಗಳಿಗೆ ಧ್ಯಾನದ ವಿದ್ಯಾರ್ಥಿಗಳು ತಪ್ಪದೆ ಹಾಜರಾಗಬೇಕೆಂದು ಕೋರುತ್ತೇವೆ. ದೀರ್ಘಾವಧಿಯವರೆಗೆ ಚೆಕ್‌ಅಪ್‌ಗಳನ್ನು ತಪ್ಪಿಸಿಕೊಂಡರೆ, ಅವರು ಧ್ಯಾನವನ್ನು ನಿಲ್ಲಿಸಿದ್ದಾರೆಂದು ಭಾವಿಸಲಾಗುತ್ತದೆ. ಅದೇ ರೀತಿ ದೂರಕಲಿಕೆಯ ವಿದ್ಯಾರ್ಥಿಗಳು ಕೂಡ ಸಮಯಕ್ಕೆ ಸರಿಯಾಗಿ ತಮ್ಮ ಅಭ್ಯಾಸ ವರದಿಯನ್ನು ಕಳಿಸಿಕೊಡಬೇಕೆಂದು ಕೋರುತ್ತೇವೆ.
- ಇಲ್ಲಿ ಹಂಚಿಕೊಳ್ಳುವ ಜ್ಞಾನವನ್ನು ಮೆಚ್ಚಬಹುದಾದ ಜನರಿಗೆ, ನಮ್ಮ ಪುಸ್ತಕಗಳನ್ನು ಅಥವ ಡೋರ್‌ವೇಸ್/ತಪೋವಾಣಿಯ ಚಂದಾದಾರಿಕೆ-ಯನ್ನು ಕೊಡುಗೆಯಾಗಿ ನೀಡುವ ಮೂಲಕ ನಮಗೆ ಸಹಾಯ ಮಾಡಿ.
- ತಪೋನಗರದಲ್ಲಿ ಅಥವ ಬೆಂಗಳೂರಿನ ನಮ್ಮ ಇತರೆ ಕೇಂದ್ರಗಳಲ್ಲಿ ಧ್ಯಾನದ ತರಗತಿಗಳಿಗೆ ಹಾಜರಾಗುವ ವಿದ್ಯಾರ್ಥಿಗಳು, ತಿಂಗಳಿನ ಎರಡನೆಯ ತರಗತಿಯ ಒಳಗಾಗಿ ತಿಂಗಳ ಶುಲ್ಕವನ್ನು ನೀಡಬೇಕಾಗಿ ಕೋರುತ್ತೇವೆ. ದೂರಕಲಿಕೆಯ ವಿದ್ಯಾರ್ಥಿಗಳು ಕೂಡ, ತಮ್ಮ ನೊಂದಣಿಯು ಕೊನೆಗೊಳ್ಳುವುದಕ್ಕೆ 15 ದಿನಗಳು ಮುಂಚಿತವಾಗಿಯೇ ನವೀಕರಿಸಬೇಕಾಗಿ ಕೋರುತ್ತೇವೆ. ಆಗ, ಪ್ರತಿ ತಿಂಗಳೂ ಅಂಚೆ ಮೂಲಕ ರವಾನಿಸುವ ವಾರ್ತಾಪತ್ರವನ್ನು ನಿಲ್ಲಿಸದಿರುವಂತೆ ನೋಡಿಕೊಳ್ಳಬಹುದು.

ನಮ್ಮ ದೂರವಾಣಿಯು (28465280) ಆಗಿಂದಾಗ್ಗೆ ಸ್ಥಗಿತಗೊಳ್ಳುತ್ತಿರುವುದರಿಂದಾಗಿ ನಮ್ಮನ್ನು ಸಂಪರ್ಕಿಸುವುದು ನಿಮಗೆ ಕಷ್ಟವಾದರೆ, ನಮ್ಮ ಮತ್ತೊಂದು ಸಂಖ್ಯೆಗೆ (9900075280) ಕರೆಮಾಡಿ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಶನಿ | ಶುಕ್ಲ ಅಷ್ಟಮಿ |
| 03 | ಸೋಮ | ಶುಕ್ಲ ದಶಮಿ |
| 09 | ಭಾನು | ಗುರು ಪೂರ್ಣಿಮಾ |
| 16 | ಭಾನು | ದಕ್ಷಿಣಾಯಣ ಪ್ರಾರಂಭ |
| 17 | ಸೋಮ | ಕೃಷ್ಣ ಅಷ್ಟಮಿ |
| 21 | ಶುಕ್ರ | ಮಾಸ ಶಿವರಾತ್ರಿ |
| 23 | ಭಾನು | ಅಮಾವಾಸ್ಯೆ |
| 31 | ಸೋಮ | ಶುಕ್ಲ ಅಷ್ಟಮಿ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11–12<br>ಲೈಟ್ ಚಾನಲಿಂಗ್: ಮಧ್ಯಾಹ್ನ 12–1 |
| 09-7-2016 | ಗುರು ಪೂರ್ಣಿಮೆಯ ವಿಶೇಷ ಧ್ಯಾನ: ಬೆಳಿಗ್ಗೆ 11 ರಿಂದ ಮಧ್ಯಾಹ್ನ 1<br>ಶಂಬಲ ತಂಡ ಮಧ್ಯಾಹ್ನ 2 ಕ್ಕೆ ಸಂಧಿಸುತ್ತದೆ<br>ಲೈಟ್ ಚಾನಲ್ ಕಾರ್ಯಕರ್ತರ ಸಭೆ ಮಧ್ಯಾಹ್ನ 2.30 ಕ್ಕೆ |
| 16-7-2016 | ರಾ ತಂಡ ಮಧ್ಯಾಹ್ನ 2 ಕ್ಕೆ ಸಂಧಿಸುತ್ತದೆ |
| 30-7-2016 | ಅಖಂಡ ಧ್ಯಾನ (ಲೈಟ್ ಚಾನಲಿಂಗ್): ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 |

ಜೂನ್ 25ರಂದು ಪ್ರಾರಂಭವಾದ ಆಷಾಢ ಮಾಸದಲ್ಲಿ ಅದ್ಭುತವಾದ ಮತ್ತು ಮಹಾನ್ ಚೈತನ್ಯಗಳನ್ನು ನಾವು ನೇರವಾಗಿ ಪರಬ್ರಹ್ಮ ಲೋಕದಿಂದ ಪಡೆಯುತ್ತೇವೆ. 09-7-2017ರ ಗುರು ಪೂರ್ಣಿಮೆಯ ದಿನದಂದು ಅವು ಅತಿ ಹೆಚ್ಚು ಇರುತ್ತವೆ. ಆ ದಿನದಂದು ನಮಗೆ ಸಾಧ್ಯವಷ್ಟೂ ಹೆಚ್ಚು ಧ್ಯಾನ ಮಾಡಬಹುದು. ಆ ದಿನದಂದು ರಾತ್ರಿ ಮಲಗುವುದಕ್ಕೆ ಮುಂಚೆ, ಮೇಲಿನಿಂದ ಬೆಳಕು ನಿಮ್ಮನ್ನು ಪ್ರವೇಶಿಸಿ ಇಡೀ ಶಾರೀರಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ತುಂಬುತ್ತದೆಂದು ಕಲ್ಪಿಸಿಕೊಳ್ಳಿ. ಈ ರೀತಿ 7 ನಿಮಿಷಗಳು ಅಭ್ಯಾಸಮಾಡಿ. ಇಡೀ ರಾತ್ರಿ ನಾವು ಚೈತನ್ಯಗಳನ್ನು ಪಡೆಯುತ್ತಿರುತ್ತೇವೆ.

## ಲೈಟ್ ಚಾನಲಿಂಗ್ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಇತ್ತೀಚೆಗೆ ನಾನು ತಮಿಳು ನಾಡಿನ ಒಂದು ಚಿಕ್ಕ ಹಳ್ಳಿಗೆ ಲೈಟ್ ಚಾನಲಿಂಗ್ ಮಾಡಿಸುವುದಕ್ಕಾಗಿ ಹೋಗಿದ್ದೆ. ಅಲ್ಲಿನ ಜನರು ತಮ್ಮ ಧರ್ಮಗಳನ್ನು ಮರೆತು ಲೈಟ್ ಚಾನಲಿಂಗ್ ಟೆಕ್ನಿಕ್‌ಅನ್ನು ಸ್ವಾಗತಿಸಿದ್ದು ನನಗೆ ಆಶ್ಚರ್ಯವಾಯಿತು. ಈ ಪ್ರಯಾಣದ ಬಹು ಭಾಗ ನಾನು ಸಮಾಧಾನದಿಂದ, ಹರ್ಷಚಿತ್ತಳಾಗಿ ಮತ್ತು ಉತ್ಸಾಹಿಯಾಗಿದ್ದೆ. ಇದರಿಂದ ಅಲ್ಲಿ ಎದುರಾದ ಯಾವುದೇ ರೀತಿಯ ಅನಾನುಕೂಲಗಳು ನಮ್ಮನ್ನು ಬಾಧಿಸಲಿಲ್ಲ. ಅಲ್ಲಿ ಬೀಸುತ್ತಿದ್ದ ಗಾಳಿಯಲ್ಲೂ ಶಾಂತಿ ಮತ್ತು ಪ್ರೀತಿ ತುಂಬಿತ್ತು. ನಾನು ಮಾಡುತ್ತಿರುವ ಒಳ್ಳೆಯ ಕೆಲಸ ನೋಡಿ, ಒಂದು ದಿನ ಆಟೋ ಚಾಲಕ ನಾನು ಹೆಚ್ಚು ಸಮಯ ತೆಗೆದುಕೊಂಡಿದ್ದಕ್ಕಾಗಿ, ಹೆಚ್ಚುವರಿ ಹಣವನ್ನು ತೆಗೆದುಕೊಳ್ಳಲೂ ನಿರಾಕರಿಸಿದ್ದ. ಆಟೋದಲ್ಲಿ ಪ್ರಯಾಣಿಸುವಾಗ ನಾನು ಫೋನ್ ಮೂಲಕ ಶಾಲೆಯ ಹೆಡ್ ಮಾಸ್ಟರ್ ಅವರೊಂದಿಗೆ ಮಾತನಾಡಿದ ಸಂಭಾಷಣೆಯನ್ನು ಚಾಲಕ ಕೇಳಿಸಿಕೊಂಡಿದ್ದ. ಹೀಗಾಗಿ ಆ ಚಾಲಕ ತನ್ನದೇ ರೀತಿಯಲ್ಲಿ ಕೊಡುಗೆ ನೀಡ ಬಯಸಿದ್ದ. ಬೇರೆಯವರು ಸಹ ತಮ್ಮ ತಮ್ಮ ರೀತಿಯಲ್ಲಿ ಸಹಾಯ ಮಾಡಲು ಮುಂದೆ ಬಂದಿದ್ದರು. ಅವರು ತೋರಿದ ಪ್ರೀತಿಯಲ್ಲಿ ನಾವು ಕರಗಿ ಹೋದೆವು.

– ನಿರ್ಮಲ ಬಾಲ, ಕಾರ್ಯಕರ್ತೆ

ಕಳೆದ ಎರಡು ವರ್ಷಗಳಿಂದ ಲೈಟ್ ಚಾನಲಿಂಗ್ ಮಾಡಿರದ ಶಾಲೆಗೆ ವಿಶ್ವ ಚಾನಲ್ಸ್ ದಿನದಂದು ನಾನು ಹೋಗಿದ್ದೆ. ನಿಮ್ಮಲ್ಲಿ ಎಷ್ಟು ಮಕ್ಕಳಿಗೆ ಲೈಟ್ ಚಾನಲಿಂಗ್ ನೆನಪಿದೆ ಎಂದು ನಾನು ಕೇಳಿದಾಗ, ನನಗೆ ಆಶ್ಚರ್ಯವಾಗುವ ರೀತಿಯಲ್ಲಿ ಪ್ರೈಮರಿ ಸೆಕ್ಷನ್‌ನ ಮಕ್ಕಳ ಪುಟ್ಟ ಕೈಗಳು ಮೇಲೆದ್ದವು! ಸಂಪೂರ್ಣ ಮೌನದೊಂದಿಗೆ ಸೆಷನ್ ಪ್ರಾರಂಭವಾಯಿತು. ಮೊದಲನೆಯ ತರಗತಿಯ ಚಿಕ್ಕ ಮಕ್ಕಳು ಸಹ ಸಂಪೂರ್ಣ ನಿಶ್ಚಲತೆಯಿಂದ ಕುಳಿತ್ತಿದ್ದರು. ಚಾನಲಿಂಗ್ ಸೆಷನ್ ಆಗುತ್ತಿದ್ದಂತೆ, ಮಕ್ಕಳು ಮನಸ್ಸಿಲ್ಲದೇ ತಮ್ಮ ಕಣ್ಣುಗಳನ್ನು ತೆರೆದರು. ಅದೇ ದಿನ ಅವರಿಗೆ ಪರೀಕ್ಷೆ ಇತ್ತು. ಲೈಟ್ ಚಾನಲಿಂಗ್ ಅಭ್ಯಾಸದಿಂದ ತಮಗೆ ಶಾಂತಿ ಸಮಾಧಾನ ತಂದಿದೆ, ಮತ್ತು ಪರೀಕ್ಷೆಯಲ್ಲಿ ಬರೆಯಲೂ ಆತ್ಮ ವಿಶ್ವಾಸ ಮೂಡಿಸಿದೆ ಎಂದು ಅಭಿಪ್ರಾಯ ವ್ಯಕ್ತ ಪಡಿಸಿದರು.

– ಪ್ರಿಯಂವದ ಕುಲಕರ್ಣಿ, ಕಾರ್ಯಕರ್ತೆ

1ರಿಂದ 4ನೇ ತರಗತಿ ವಿದ್ಯಾರ್ಥಿಗಳಿಗೆ ಲೈಟ್ ಚಾನಲಿಂಗ್ ಹೇಳಿಕೊಟ್ಟಿದ್ದೇವೆ, ಹಾಗೇ ಅವರ ಪೋಷಕರಿಗೂ ಲೈಟ್ ಚಾನಲಿಂಗ್ ಬಗ್ಗೆ ತಿಳಿಸಿದ್ದೇವೆ. ಈಗ ವಿದ್ಯಾರ್ಥಿಗಳು ನಿಯತವಾಗಿ ಲೈಟ್ ಚಾನಲಿಂಗ್ ಮಾಡುತ್ತಿದ್ದಾರೆ. ಇದರಿಂದ ಶಾಲೆಗೆ ಪ್ರಯೋಜನವಾಗಿದೆ, ಕಾರಣ ವಿದ್ಯಾರ್ಥಿಗಳು ಹೆಚ್ಚು ಶಿಸ್ತು ಬದ್ಧರಾಗಿದ್ದಾರೆ.

– ಶ್ರೀಮತಿ. ಕಾಲೇ, ಪ್ರಿನ್ಸಿಪಾಲ್, ಎಮ್.ಐ.ಟಿ. ಶ್ರೀ ಸ್ವಾಮಿ ವಿವೇಕಾನಂದ ಪ್ರೈಮರಿ ಸ್ಕೂಲ್, ಪುಣೆ.

ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತಿರುವುದರಿಂದ, ನಾನು ಸಮಾಧಾನದಿಂದ ಇರುವುದಕ್ಕೆ ಸಾಧ್ಯವಾಗಿದೆ. ನನ್ನ ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸುವಂತೆ ಮಾಡಿದೆ. ನಾನು ಒಳ್ಳೆಯನಾಗಿರಬೇಕು, ನನ್ನ ಸ್ನೇಹಿತರ ಜೊತೆ ಸ್ನೇಹದಿಂದ ಇದ್ದು ಅವರಿಗೆ ಸಹಾಯ ಮಾಡಬೇಕೆಂದು ಅನಿಸುತ್ತಿದೆ.

– ದರ್ಶನ್ ಆರ್. 6ನೇ ತರಗತಿ, ಶ್ರೀ ಶಾರದ ಪ್ರೈಮರಿ ಸ್ಕೂಲ್, ಜಯನಗರ, ಬೆಂಗಳೂರು.

## ತಪೋನಗರ ಡೈರಿ

**ಸೀಮಾ ಅಲ್‌ವೇಲ್; ಅನು: ಪಾಂಡುರಂಗ**

ತಿಂಗಳ ತಪೋನಗರ ನಿವಾಸಿಗಳ ಕೂಟದಲ್ಲಿ, ಗುರೂಜಿಯವರ 78ನೇ ವರ್ಷದ ಹುಟ್ಟು ಹಬ್ಬದ ಕಾರ್ಯಕ್ರಮದಲ್ಲಿ ಸುಮಾರು ನೂರು ನಿವಾಸಿಗಳು ಭಾಗವಹಿಸಿದ್ದರು. ಹಿಂದಿನ ವಿಶೇಷ ಕ್ಷಣಗಳನ್ನು ಮತ್ತೊಮ್ಮೆ ಅನುಭವಕ್ಕೆ ತಂದುಕೊಂಡಾಗ, ದಿವ್ಯ ಪ್ರೀತಿ ಹೊಮ್ಮಿ ಮಹಾನ್ ಋಷಿಗಳ ಕೆಲಸಕ್ಕಾಗಿ ಶಾಶ್ವತವಾದ ಕಟಿಬದ್ಧತೆಯನ್ನು ತಂದು ಕೊಡುತ್ತದೆ. ಅದಕ್ಕಾಗಿ ಹಿಂದೆ ನೋಡಿರದ ಗುರೂಜಿಯವರ ಜೊತೆಗಿದ್ದ ಸಾಧಕರ ಫೋಟೋಗಳನ್ನು ಪ್ರದರ್ಶಿಸಲಾಯಿತು.

ಕಳೆದ ಅನೇಕ ವರ್ಷಗಳ ಪಯಣವನ್ನು ಸ್ಮರಿಸಿಕೊಂಡಾಗ, ಅದು ವರ್ತಮಾನ ಕಾಲದ ವಿಷಯಗಳ ಪರಿಷ್ಕರಣೆಗೆ ಸಹಾಯ ಮಾಡುತ್ತದೆ. ಸುದೈವದಿಂದ ತಪೋನಗರದ ಅನೇಕ ಪೋಷಕರಲ್ಲಿಯೇ ಇದು ಬೆಳೆದು ಬಂದಿದೆ. ಕಳೆದ ವರ್ಷ ಶ್ರೀ. ಬ್ರಜಬಂಧು ಮಿಶ್ರ ಮತ್ತು ಶ್ರೀಮತಿ. ಪ್ರಿಯಾಂಕ ಮಿಶ್ರರವರು 'ತಪೋನಗರ ಗುರುಕುಲ'ವೆಂಬ ಯೋಜನೆಯನ್ನು ಪ್ರಾರಂಭಿಸಿದ್ದಾರೆ. ಇದರ ಉದ್ದೇಶ ಮಕ್ಕಳಿಗೆ ನಮ್ಮ ಭಾರತದ ಪೌರಾಣಿಕ ಪರಂಪರೆಯ ಜ್ಞಾನವನ್ನು ನೀಡುವುದಾಗಿದೆ. ತಿಂಗಳಲ್ಲಿ ಎರಡು ಸೆಷನ್‌ಗಳು ನಡೆಸುತ್ತಿದ್ದು, ಹದಿ ಹರೆಯದವರಿಗೂ ಇದು ಇಷ್ಟವಾಗಿದೆ. ಈ ವರ್ಷ ಮೂವೀ ಕ್ಲಬ್ ಅನ್ನುವ ಒಂದು ಕಾರ್ಯಕ್ರಮವನ್ನು ಪ್ರಾರಂಭಿಸಿಕೊಂಡಿದ್ದಾರೆ. ಪ್ರತಿ ಎರಡನೆಯ ಭಾನುವಾರ ನಿವಾಸಿಗಳು ಸಮುದಾಯ ಸಭಾಂಗಣದಲ್ಲಿ ಸೇರಿ ಒಂದು ಅರ್ಥಪೂರ್ಣವಾದ ಚಲನ ಚಿತ್ರವನ್ನು ವೀಕ್ಷಿಸುತ್ತಾರೆ. ಇದಕ್ಕಾಗಿ ಶ್ರೀ. ಗುರುರಾಜ್ ಕಾನಡೆಯವರು ವಿಶೇಷ ವ್ಯವಸ್ಥೆಗಳನ್ನು ಮಾಡಿದ್ದಾರೆ. ಹೊಸ ಪ್ರೊಜೆಕ್ಟರ್, ಹೊಸ ಪರದೆ, ಸ್ಪೀಕರ್ ಸಿಸ್ಟಮ್‌ಗಳನ್ನು ಅಳವಡಿಸಿದ್ದಾರೆ. ಬುಕ್ ಕ್ಲಬ್ ಸೆಷನ್‌ನಲ್ಲಿ ಕಡಿಮೆ ಪ್ರಮಾಣದಲ್ಲಿ ಹಾಜರಾತಿ ಇದ್ದರೂ ಮುಂದುವರಿಯುತ್ತಿದೆ.

ಎಲ್ಲರೊಂದಿಗೆ ಹಂಚಿಕೊಳ್ಳುವ ಉದ್ದೇಶವನ್ನು ಹೊಂದಿರುವ ತಪೋನಗರ ನಿವಾಸಿಗಳು ಸಮುದಾಯ ಕಾರ್ಯಕ್ರಮಗಳನ್ನಾಗಿ ಆಯೋಜಿಸುತ್ತಾರೆ. ಇದಕ್ಕಾಗಿ ತಮ್ಮ ವೈಯಕ್ತಿಕ ಸಮಯವನ್ನು ಮೀಸಲಿಟ್ಟು ಭಾಗವಹಿಸುವ ದೊಡ್ಡ ಸಮೂಹಕ್ಕೆ ವಿಶೇಷ ಕ್ಷಣಗಳನ್ನಾಗಿ ಸೃಷ್ಟಿಸಲೂ ಪ್ರಯತ್ನಿಸುತ್ತಿದ್ದಾರೆ. ಹಾಗೇ ಪ್ರತಿ ಸಾರಿ ಶ್ರೀ. ಚಂದ್ರನ್‌ರವರು ಈ ವಿಶೇಷ ಕ್ಷಣಗಳನ್ನು ಸುಂದರವಾಗಿ ಫೋಟೋಗಳಲ್ಲಿ ಚಿತ್ರೀಕರಿಸಿಕೊಳ್ಳುತ್ತಾರೆ. ಮುಂದೆ ಈ ಫೋಟೋಗಳೇ ಮುಂದಿನ ತಲೆಮಾರುಗಳಿಗೆ ಅನಾವರಣಗೊಂಡ ಕೊಡುಗೆಗಳಾಗಲಿವೆ. ■

## ಲೈಟ್ ಚಾನಲ್ಸ್

**ವಿಶ್ವ ಸಂಚಲನ**

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

## ಗುರೂಜಿಯವರ ನುಡಿಗಳು

**ಗುರೂಜಿಯವರ ಭಾಷಣಗಳಿಂದ ಆಯ್ದ ಭಾಗಗಳು**

**ಸಂ: ಶೋಭಾ ಕೆ. ರಾವ್; ಅನು: ಸುಧಾಕರ್**

ಜುಲೈ 2005

ಋಷಿಗಳಿಗೆ ನಮ್ಮ ಹಿಂದಿನದು ಮತ್ತು ಮುಂದಿನದು ತಿಳಿದಿರುತ್ತದೆ. ಒಂದೇ ವಾಕ್ಯದಲ್ಲಿ ಹೇಳಬೇಕೆಂದರೆ – ಅವರಿಗೆ ಎಲ್ಲವೂ ತಿಳಿದಿರುತ್ತದೆ. ನಾವು ಸಲಹೆಯನ್ನು ಕೇಳಿದಾಗ, 'ಈ ಸೂಚನೆಗಳನ್ನು ಪಾಲಿಸಿ' ಎಂದು ತಿಳಿಸುತ್ತಾರೆ. ಇದನ್ನು ಅತ್ಯುತ್ತಮವಾದ ಮತ್ತು ಅತ್ಯಂತ ಸಮಂಜಸವಾದ ಸಲಹೆ ಎಂದು ನಾವು ಸ್ವೀಕರಿಸಬೇಕು. ಇದನ್ನು ಅನುಸರಿಸಿದಾಗ ನಮ್ಮ ಆಧ್ಯಾತ್ಮಿಕ ಗುರಿಗಳು ಮತ್ತು ಲೌಕಿಕ ಗುರಿಗಳನ್ನು ಸಾಧಿಸುತ್ತೇವೆ. ಅವರ ಸಲಹೆಗಳನ್ನು ಚಾಚೂ ತಪ್ಪದೆ ಪಾಲಿಸಿದವರು ಬಹಳ ಸಂತೋಷದಿಂದಿರುವುದನ್ನು ನಾನು ಕಂಡಿದ್ದೇನೆ. ಅಹಂನಿಂದಾಗಿ ಕೆಲವೊಮ್ಮೆ ನಾವು ಅವುಗಳನ್ನು ಪಾಲಿಸುವುದಿಲ್ಲ. ಕೆಲವೊಮ್ಮೆ ಅವರ ಸೂಚನೆಗಳನ್ನು ಭಾಗಶಃ ಪಾಲಿಸುತ್ತೇವೆ. ಋಷಿಗಳನ್ನು ಪೂರ್ಣವಾಗಿ ಪಾಲಿಸದಿರುವವರು ಸಮಸ್ಯೆಗಳನ್ನು ಹೊಂದಿರುವುದನ್ನು 1988ರಿಂದಲೂ ನಾನು ಕಂಡಿದ್ದೇನೆ. ಹಾಗೂ ಕೆಲವೊಮ್ಮೆ ಇಚ್ಛಾಪೂರ್ವಕವಾಗಿಯಲ್ಲದಿದ್ದರೂ ನಮಗೇ ಗೊತ್ತಿಲ್ಲದೆ, ಋಷಿಗಳಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿರುತ್ತೇವೆ. ಸ್ವಲ್ಪ ವಿಸ್ತರಿಸಿ ಹಾಸ್ಯವಾಗಿ ಹೇಳುತ್ತಿದ್ದೇನೆ. ಅಮರರವರಿದ್ದಾಗ ಭಜನೆಗಳಿರುತ್ತಿದ್ದವು. ನಮ್ಮಲ್ಲೊಬ್ಬರಿಗೆ ಹಿಂದಿ ಸ್ವಲ್ಪವೂ ಬರುತ್ತಿರಲಿಲ್ಲ. ಅವರು ಉತ್ತಮ ಧ್ವನಿಯಿದ್ದ ತುಂಬ ಸರಳ ವ್ಯಕ್ತಿ. ಭಜನೆಯೊಂದರಲ್ಲಿ 'ಹೃದಯ ಮೆ ಸೆ ಮತ್ ಜಾವೋ,' ಎಂಬ ಪದಗಳಿದ್ದಾಗ, ಅವರು, 'ಮತ್ ಆವೋ!' ಎಂದು ಹೇಳುತ್ತಿದ್ದರು! ಅದನ್ನು ಎಷ್ಟೊಂದು ಭಕ್ತಿಯಿಂದ ಹೇಳುತ್ತಿದ್ದರು! ಕೆಲವೊಮ್ಮೆ ನಾವು ಹಾಗೆಯೇ ಮಾಡುತ್ತೇವೆ.

ನಾವು ಈ ಮಾರ್ಗಕ್ಕೆ ಸೇರಿ, ಋಷಿಗಳ, ಸೂಕ್ಷ್ಮಯಾನದ ಮತ್ತಿತರ ನಂಬಿಕೆಗೆ ಮೀರಿದ ವಿಷಯಗಳ ಬಗ್ಗೆ ತಿಳಿದುಕೊಂಡಾಗ, ಅದನ್ನು ನಮ್ಮ ಸ್ನೇಹಿತರಿಗೆ ತಿಳಿಸುವ, ಅವರನ್ನು ಈ ಮಾರ್ಗಕ್ಕೆ ಪರಿಚಯಿಸುವ ಪ್ರವೃತ್ತಿ ಇರುತ್ತದೆ. ಅದರಲ್ಲಿ ತಪ್ಪೇನೂ ಇಲ್ಲ, ಅದೊಂದು ಪ್ರಶಂಸನೀಯ ಮತ್ತು ಘನವಾದ ಉದ್ದೇಶವಾಗಿದೆ; ಆದರೆ ಋಷಿಗಳ ದಾರಿಯು ಸ್ವಲ್ಪ ಬೇರೆಯೇ ಆಗಿದೆ. ಈ ಮಾರ್ಗದ ಬಗ್ಗೆ ನಾವು ಜನರಿಗೆ ತಿಳಿಸಬಹುದು, ಅವರು ಆಸಕ್ತಿ ತೋರಿಸಿದರೆ ಒಳ್ಳೆಯದು, ನಮ್ಮಲ್ಲಿಗೆ ಬಂದರೆ ಇನ್ನೂ ಒಳ್ಳೆಯದು; ಆದರೆ ಜನರಿಗೆ ಒಪ್ಪಿಗೆಯಾಗದಿದ್ದರೆ ಅದನ್ನು ಅಲ್ಲಿಗೇ ಬಿಡಬೇಕು. ಆದರೆ ಋಷಿಗಳ ವಿಧಾನ ತಿಳಿಯದಿರುವ ನಮ್ಮಲ್ಲಿನ ಕೆಲವರು, ಕೆಲವೊಮ್ಮೆ ಅವರನ್ನು ಒತ್ತಾಯಿಸುತ್ತಾರೆ. ಕೂಡಲೇ ನಮ್ಮಲ್ಲಿಗೆ ಬರದಿರಲು ಅವರಿಗೆ ಅನೇಕ ಕಾರಣಗಳಿರಬಹುದು. ಅವರು ಇನ್ನೂ ಸಿದ್ಧರಾಗಿಲ್ಲದಿರಬಹುದು ಅಥವ ಅವರು ಬೇರೊಂದು ಮಾರ್ಗವನ್ನು ಸೇರಬಯಸಿರಬಹುದು; ಅವರನ್ನು ನೀವು ಒತ್ತಾಯದಿಂದ ಇಲ್ಲಿಗೆ ಕರೆತಂದರೆ, ಅವರು ಬಹಳ ಕಾಲ ಇಲ್ಲಿ ನಿಲ್ಲದೆ, ಬಿಟ್ಟು ಹೋಗಬಹುದು. ನಮ್ಮನ್ನು ಆಧ್ಯಾತ್ಮಿಕವಾಗಿ ಮೇಲೆತ್ತಿ ನಾವು ನಮ್ಮ ಆಧ್ಯಾತ್ಮಿಕ ಗುರಿಗಳನ್ನು ಮುಟ್ಟುವಂತೆ ಮಾಡುವುದಕ್ಕಾಗಿಯೇ ಎಲ್ಲ ಆಧ್ಯಾತ್ಮಿಕ ಮಾರ್ಗಗಳಿರುವುದು. ನಮ್ಮ ಸಮಸ್ಯೆಗಳನ್ನು ಪರಿಹರಿಸುವುದು, ಹೀಲ್ ಮಾಡುವುದು ಪ್ರಮುಖವಲ್ಲ, ಅದು ನಂತರದ್ದು. ಕೆಲವೊಮ್ಮೆ ನಿಮ್ಮಲ್ಲಿ ಕೆಲವರು ಅವರಿಗೆ ಹೇಳಬಹುದು, 'ನಿಮಗೆ ಸಮಸ್ಯೆಯಿದ್ದರೆ ಇಲ್ಲಿಗೆ ಬನ್ನಿ; ನಿಮಗೆ ಅನಾರೋಗ್ಯವಿದ್ದರೆ ಬನ್ನಿ.' ನೀವು ಧ್ಯಾನವನ್ನೂ ಮಾಡಬೇಕಾಗುತ್ತದೆ ಎಂದೂ ಅವರಿಗೆ ಹೇಳಿ. ನಾವು ಬದಲಾಗಲು ನಿರ್ಧರಿಸಿದಾಗ ಮಾತ್ರವೇ, ನಾವು ಬದಲಾಗಲು ಇಚ್ಛಿಸಿದಾಗ ಮಾತ್ರವೇ ನಮ್ಮಲ್ಲಿಗೆ ಎಲ್ಲ ಸಹಾಯಗಳೂ ಬರುತ್ತವೆ. ಕೆಲವೊಮ್ಮೆ ಋಷಿಗಳ ಮಾರ್ಗದ ಇಂತಹ ಸಣ್ಣ ವಿಷಯಗಳನ್ನು ನಾವು ಅರ್ಥಮಾಡಿ–ಕೊಳ್ಳುವುದಿಲ್ಲ. ಆದ್ದರಿಂದಲೇ, ಇಲ್ಲಿನ ಕೆಲಸಕ್ಕೆ ಸೇರಲು ತುದಿಗಾಲಲ್ಲಿ ನಿಂತವರಿಗೆ ನಾನು ಹೇಳುತ್ತೇನೆ – ಮೊದಲಿಗೆ ಜ್ಞಾನವನ್ನು ಪಡೆದು ಸಿದ್ಧರಾಗಿ, ಋಷಿಗಳ ವಿಧಾನಗಳನ್ನು ಪರಿಚಯಮಾಡಿಕೊಳ್ಳಿ. ನಮಗೆ ಯಾವುದೇ ಅವಸರವಿಲ್ಲ. ಕಾಯುತ್ತೇವೆ. ಜನರು ಬಂದು ಸೇರುವವರೆಗೂ ಕಾಯುತ್ತೇವೆ. ಜನರು ಸಾಧನೆಯನ್ನು ಕೈಗೆತ್ತಿಕೊಳ್ಳುವುದಕ್ಕಾಗಿ ಕಾಯುತ್ತೇವೆ, ನಮ್ಮ ತಂಡವನ್ನೇ ಸೇರಬೇಕೆಂದೇನೂ ಇಲ್ಲ. ಅವರು ಎಲ್ಲಿ ಬೇಕಾದರೂ ಸೇರಬಹುದು.

ಎರಡು ವರ್ಷಗಳ ಹಿಂದೆ, ಸೌತ್ ಆಫ್ರಿಕದಿಂದ ನಿರಂತರವಾಗಿ ಜನರು ನನ್ನಲ್ಲಿಗೆ ಬರುತ್ತಿದ್ದರು. ನಾಲ್ಕು ಜನರನ್ನು ಭೇಟಿಯಾದೆ. ಆ ತಂಡದಲ್ಲಿನ ಯುವಕನೊಬ್ಬನು ಝೂಲೂಗಳ ಬಗ್ಗೆ ಪುಸ್ತಕವೊಂದನ್ನು ಕೊಟ್ಟ. ಆ ತಂಡದೊಂದಿಗೆ ನಾವು ಮಾತನಾಡುತ್ತಿದ್ದಾಗ, ಅವರು ಸೌತ್ ಆಫ್ರಿಕವನ್ನು ಪ್ರೀತಿಸುತ್ತಾರೆನ್ನುವುದನ್ನು ಗಮನಿಸಿದೆ. ಋಷಿಗಳು ಆಫ್ರಿಕಾಗೆ ಚೈತನ್ಯಗಳ ಮಳೆಗರೆಯುತ್ತಿದ್ದಾರೆ. ಆಫ್ರಿಕದ ಜನರು ಜಾಗೃತಗೊಂಡು ಆಧ್ಯಾತ್ಮಿಕವಾಗಿ ಮತ್ತು ಭೌತವಾಗಿ ಅಭಿವೃದ್ಧಿಹೊಂದುವ ಸಮಯ ಬಂದಿದೆಯೆಂದು ನಾನು ಆ ತಂಡಕ್ಕೆ ಎರಡು ವರ್ಷಗಳ ಹಿಂದೆ ಹೇಳಿದ್ದು ನನಗೆ ನೆನಪಿದೆ. ಆರು ತಿಂಗಳಿನಿಂದ, ಧ್ಯಾನಕ್ಕಾಗಿ ಕಣ್ಣುಮುಚ್ಚಿದಾಗಲೆಲ್ಲ ನಾನು ಕಾಣುತ್ತಿದ್ದ ಮೊದಲ ಚಿತ್ರಣವೆಂದರೆ ಆಫ್ರಿಕ ದೇಶದ್ದು. ಅದೇಕೆಂದು ನಾನು ಆಶ್ಚರ್ಯಪಡುತ್ತಿದ್ದೆ. ನಾವು ಅನೇಕ ಕೆಲಸಗಳಲ್ಲಿ ತೊಡಗಿಕೊಂಡಿರುವುದು ನಂತರದಲ್ಲಿ ನನಗೆ ತಿಳಿದುಬಂತು. ಋಷಿಗಳು ಅನೇಕ ಸ್ಥಳಗಳನ್ನು ಚೈತನ್ಯೀಕರಿಸಿದಾಗ, ನಾವು ಆಫ್ರಿಕದಲ್ಲಿ ಬಹಳ ಕೆಲಸ ಮಾಡಿದ್ದೆವು. ಈಗ ಆಫ್ರಿಕದ ಮೇಲೆ ಬಹಳ ಗಮನ ಕೇಂದ್ರೀಕೃತವಾಗಿರುವುದನ್ನು ನಾವು ನೋಡಬಹುದು. ಅಲ್ಲಿ ಅನೇಕ ಶಾಲೆಗಳು ತೆರೆದಿರುವುದನ್ನು ಮತ್ತು ಅಲ್ಲಿನ ಜನರು ವಿದ್ಯಾವಂತರಾಗುತ್ತಿರುವುದನ್ನು ನಾವು ಗಮನಿಸಬಹುದು. ಋಷಿಗಳ ವಿಧಾನಗಳು ಯಾವಾಗಲೂ ನನ್ನನ್ನು ಚಕಿತಗೊಳಿಸುತ್ತವೆ. ಕೆಲವೊಮ್ಮೆ, ಮುಖವೊಂದನ್ನು ಕಾಣುತ್ತೇನೆ, ಅದು ಯಾರಿರಬಹುದೆಂದು ಆಶ್ಚರ್ಯಪಡುತ್ತೇನೆ. ಕೆಲವು ತಿಂಗಳಿನ ನಂತರ ಆ ವ್ಯಕ್ತಿ ನಮ್ಮ ಬಳಿಗೆ ಬರುತ್ತಾನೆ! ಅದು ನಮ್ಮ ವಿದ್ಯಾರ್ಥಿಯಾಗಿರಬೇಕೆಂದೇನೂ ಇಲ್ಲ ಒಬ್ಬ ಭೇಟಿಗಾರರಿರಲೂ ಬಹುದು. ಋಷಿಗಳ ವಿಧಾನಗಳು ಯಾವಾಗಲೂ ಆಶ್ಚರ್ಯ–ಕರವಾಗಿರುತ್ತವೆ.

ಲಂಡನ್‌ನಲ್ಲಿನ ಸ್ಫೋಟದ ಬಗ್ಗೆ ಬಹಳಷ್ಟು ಪ್ರಚಾರವಿದೆ. ಜಮ್ಮು ಮತ್ತು ಕಾಶ್ಮೀರಗಳಂತಹ ಪ್ರಪಂಚದ ಅನೇಕ ಕಡೆಗಳಲ್ಲಿ ಜನರನ್ನು ಕೊಲ್ಲಲಾಗುತ್ತಿದೆ, ಅದರೆ ಅದನ್ನು ಒಂದು ವಾಕ್ಯದಲ್ಲಿಯೇ ಹೇಳಿ ಮುಗಿಸುತ್ತಾರೆ, ಈ ರೀತಿಯಲ್ಲಿ ಇಬ್ಬಗೆಯ ನೀತಿಗಳಿವೆಯೆಂದು ಟಿವಿ ವಿವರಣಕಾರರೊಬ್ಬರು ಹೇಳುತ್ತಿದ್ದುದನ್ನು ನಾನು ಕೇಳಿಸಿಕೊಂಡೆ.

ಇಂತಹ ಘಟನೆಗಳು ಜರುಗಿದಾಗಲೆಲ್ಲ, ನಾವು ಹೆಚ್ಚು ಧ್ಯಾನಮಾಡಬೇಕೆಂದು ಋಷಿಗಳು ನನ್ನ ಮನಸ್ಸಿನಲ್ಲಿ ಕೆತ್ತಿರುವ ವಿಷಯವೇ ನನ್ನ ಗಮನಕ್ಕೆ ಮೊದಲು ಬರುತ್ತದೆ. ನಾವು ಇನ್ನೂ ಹೆಚ್ಚು ಚೈತನ್ಯಗಳನ್ನು ತಂದು ಈ ಎಲ್ಲ ನಕಾರಾತ್ಮಕತೆಯನ್ನೂ ಬದಲಾಯಿಸಬೇಕು. ಆದ್ದರಿಂದ ಈ ರೀತಿಯಾಗಿ ನಡೆದಾಗಲೆಲ್ಲ ಧ್ಯಾನಿಗಳಾದ ನಾವು ಪ್ರತಿಯೊಬ್ಬರೂ ಇದರ ಜವಾಬ್ದಾರಿ ವಹಿಸಬೇಕು. ಎಲ್ಲ ಮನುಕುಲವೂ ಒಂದೇ ದೇಹ, ಎಲ್ಲ ಮನುಕುಲವೂ ಒಂದೇ ಪ್ರಜ್ಞೆ ಎನ್ನುವುದನ್ನು ನಾವು ಯಾವಾಗಲೂ ಮರೆಯಬಾರದು. ಇಂತಹ ವಿಚಾರಗಳ ಬಗ್ಗೆ ನಾವು ಚಿಂತಿಸಬೇಕು. ನಾವು ಸತ್ಯ ಯುಗದ ಕಡೆಗೆ ಸಾಗಿದಂತೆಲ್ಲ ಇಂತಹ ಆಲೋಚನೆಗಳು ತಾವಾಗಿಯೇ ಬರುತ್ತವೆ. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

21-05-2017

"ದೇವರನ್ನು ನೀವು ನೋಡಿದ್ದೀರ?" ಎಂದು ಯಾರಾದರೂ ನನ್ನನ್ನು ಕೇಳಿದರೆ, "ಹೌದು, ರಕ್ತ ಮತ್ತು ಮಾಂಸದಿಂದ ಕೂಡಿದ ಭೌತಿಕ ದೇವರನ್ನು ಕಂಡಿದ್ದೇನೆ" ಎಂದು ನಿಶ್ಚಿತವಾಗಿ ಹೇಳುತ್ತೇನೆ. ದೇಹದ ಎಲ್ಲ ಇತಿಮಿತಿಗಳೊಂದಿಗೆ ಮತ್ತು ಮಾಂತ್ರಿಕ ಶಕ್ತಿಗಳ ಪ್ರದರ್ಶನವಿಲ್ಲದ ಆದರೆ ಪ್ರೀತಿಯ ಶಕ್ತಿಯಿಂದಲೇ ತುಂಬಿದ್ದ ಮಾನವ ರೂಪದ ದೇವರನ್ನು ಕಂಡಿರುವುದು ಎಷ್ಟೊಂದು ಮಹತ್ತರವಾದ ವಿಷಯವೆಂದು ನಾವು ಯೋಚಿಸಿದಾಗ ತಿಳಿಯುತ್ತದೆ. ಗುರೂಜಿಯವರು ಅದಾಗಿದ್ದರು, ಪ್ರೀತಿಯೇ ಮೈವೆತ್ತಿದವರಾಗಿದ್ದರು.

ಜಪಾನ್ ಭಾಷೆಗೆ ತರ್ಜುಮೆಗೊಂಡ 'Doorways to Light' ಪುಸ್ತಕವನ್ನು ಓದಿದ ನಂತರ, ಗುರೂಜಿಯವರ ತೀಕ್ಷ್ಣ ಪ್ರಾಮಾಣಿಕತೆಯು ತಮ್ಮ ಮನಮುಟ್ಟಿತೆಂದು ಜಪಾನಿನ ವ್ಯಕ್ತಿಯೊಬ್ಬರು ಪ್ರತಿಕ್ರಿಯಿಸಿದರು. 'ನನ್ನ ದರ್ಶನವಷ್ಟೇ ಸಾಕು' ಎಂದು ಗುರೂಜಿಯವರು ಹೇಳುತ್ತಿರಲಿಲ್ಲ. ದರ್ಶನ ಪಡೆದ ನಂತರ ಅಲ್ಲಿಗೇ ನಿಲ್ಲಬಾರದು, ನಾವು ಮುಂದಿನ ಹೆಜ್ಜೆಯಿಡಬೇಕು. ಸಾಧನೆಯ ಉದ್ದೇಶ ದರ್ಶನಪಡೆಯುವುದಷ್ಟೇ ಅಲ್ಲ, ಅನುಭವ ಪಡೆಯುವುದಷ್ಟೇ ಕೂಡ ಅಲ್ಲ, ಅದು ಅಂತಿಮವಾಗಿ ನಾವು ದೇವರಾಗುವುದು. ದೇವರನ್ನು ಅಭಿವ್ಯಕ್ತಿಸಲು ಪ್ರಾರಂಭಿಸಿದಾಗ ಮಾತ್ರವೇ ನಾವು ದೇವರಾಗಲು ಪ್ರಾರಂಭಿಸಿದ್ದೇವೆಂದು ಹೇಳಲು ಸಾಧ್ಯ. ಬಹುಶಃ ಗುರೂಜಿಯವರಂತೆ ದೇವರಾಗುವುದೇ ಸಾಧನೆಯ ಅಂತಿಮ ಗುರಿಯಿರಬಹುದು. ಸೂಕ್ಷ್ಮ ಮಟ್ಟದಲ್ಲಿ ದರ್ಶನ ಪಡೆಯುವುದು ಕೂಡ ಸಾಕಾಗುವುದಿಲ್ಲ. ಸಾಧನೆಯಲ್ಲಿ ಅನೇಕ ಮಟ್ಟಗಳಿರುವುದು ನನಗೆ ತಿಳಿದಿರಲಿಲ್ಲ. ಇಂತಹ ಆಶ್ಚರ್ಯಕರ ಸತ್ಯಗಳನ್ನು ನಾವು ಗುರೂಜಿಯವರಿಂದ ಕಲಿತೆವು.

ಸಮಯದಲ್ಲಿ ಹಿಂದೆ ಹೋಗಿ ಗುರೂಜಿಯವರನ್ನು ಮತ್ತೊಮ್ಮೆ ಭೇಟಿಯಾಗಬೇಕು, ನಂತರ ಈ ಜೀವನವನ್ನು ಮತ್ತೊಮ್ಮೆ ಮೊದಲಿನಿಂದ ಬದುಕಬೇಕು ಎಂದು ನನಗೆ ಅನೇಕ ಸಲ ಅನ್ನಿಸಿದೆ. ನಾನು ಅನೇಕ ತಪ್ಪುಗಳನ್ನು ಮಾಡಿದ್ದೇನೆ, ಅವುಗಳನ್ನು ಅಳಿಸಿಹಾಕಬೇಕೆಂದು ಬಯಸುತ್ತೇನೆ. ಅಂದರೆ ಮತ್ತೊಮ್ಮೆ ಬದುಕಿ ಅದೇ ತಪ್ಪುಗಳನ್ನು ಮತ್ತೆ ಮಾಡಬಾರದೆಂದು ಬಯಸುತ್ತೇನೆ. ಇದೊಂದು ಅವಾಸ್ತವಿಕ ಆಸೆಯೆಂದು ನನಗೆ ತಿಳಿದಿದೆ. ಅದೇನೇ ಇರಲಿ, ನಾವು ಹಿಂದಿರುಗಿ ಹೋಗಬೇಕಾಗಿಲ್ಲ. ದೇವರ ಈ ಪ್ರಪಂಚದಲ್ಲಿ ಅವಕಾಶಗಳು ಎಂದಿಗೂ ಕೊನೆಗೊಳ್ಳುವುದಿಲ್ಲ. ನಾವು ನಮ್ಮನ್ನು ಸರಿಪಡಿಸಿಕೊಂಡು, ಅದೇ ತಪ್ಪನ್ನು ಪುನರಾವರ್ತಿಸದೇ ಬದುಕನ್ನು ಮುಂದುವರೆಸಬೇಕು. ನಾವೆಂದೂ ಖಂಡನೆ-ಗೊಳಗಾಗುವುದಿಲ್ಲ. ಗುರೂಜಿಯವರು ಹೇಳುತ್ತಿದ್ದರು, 'ಅರಿವಾದ ನಂತರ ಅದೇ ತಪ್ಪುಗಳನ್ನು ಪುನಃ ಮಾಡಬೇಡಿ. ದೇವರು ಕ್ಷಮಿಸುತ್ತಾನೆ'. ಈ ಸತ್ಯಗಳನ್ನು ನಾವು ಅರ್ಥಮಾಡಿಕೊಳ್ಳಬೇಕು, ಏಕೆಂದರೆ ಅವು ಬದುಕನ್ನು ಮುಂದುವರೆಸಲು ಆಶಾಭಾವವನ್ನು ತುಂಬುತ್ತವೆ.

ಅದೇಕೋ ಗುರೂಜಿಯವರನ್ನು ಮತ್ತೊಮ್ಮೆ ಭೌತಿಕವಾಗಿ ಭೇಟಿಮಾಡಬೇಕೆಂಬ ಹಂಬಲವಿದೆ. ನಮಗೆ ಗುರೂಜಿಯವರ ಇರುವಿಕೆಯ ಅನುಭವವಾಗುತ್ತಿರುವುದು ನಿಜವಾದರೂ, ಆಳವಾದ ಮಟ್ಟದಲ್ಲಿ ಅವರೊಂದಿಗೆ ಸಂಪರ್ಕ ಸಾಧಿಸುವವರೆಗೂ ಈ ಹಂಬಲವಿರುತ್ತದೆಂದು ನಾನು ತಿಳಿಯುತ್ತೇನೆ. "ನಿಮ್ಮ ಅಂತರ್ಬೋಧೆಯ ಮೂಲಕ ನಿಮ್ಮನ್ನು ಮಾರ್ಗದರ್ಶಿಸುತ್ತೇನೆ," ಎಂದು ಅವರು ಹೇಳಿದ್ದರು. ನನಗೆ ಮಾತ್ರವಲ್ಲ, ನಮ್ಮಲ್ಲಿ ಪ್ರತಿಯೊಬ್ಬರಿಗೂ. ಆದರೆ ಈ ಸಂಪರ್ಕವನ್ನು ಬಲಗೊಳಿಸಬೇಕು. ಮುಂದೊಂದು ದಿನ, ಗುರೂಜಿಯವರಿಗೆ ಅಮರರವರೊಂದಿಗಿದ್ದಂಥ ಅದೇ ಸುಸ್ಪಷ್ಟ ಸಂಪರ್ಕ ನಮ್ಮೆಲ್ಲರಿಗೂ ಉಂಟಾಗುತ್ತದೆಂಬ ಭರವಸೆ ನನಗಿದೆ.

ನಮ್ಮ ಕೆಲಸವೆಂದರೆ ಅವರನ್ನು ಹೆಚ್ಚು ಅರ್ಥಮಾಡಿಕೊಳ್ಳುವುದು ಮತ್ತು ಹೆಚ್ಚು ಅಭಿವ್ಯಕ್ತಿಸುವುದಾಗಿದೆ. ಅವರ ಜ್ಞಾನ ಮತ್ತು ಚೈತನ್ಯಗಳನ್ನು ಹರಡಲು ಅದು ಅತ್ಯುತ್ತಮ ವಿಧಾನ. ಆಧ್ಯಾತ್ಮಿಕವಾಗಿ ವಿಸ್ತರಿಸುವುದೊಂದೇ ನಾವು ಮಾಡಬೇಕಾಗಿರುವುದು, ಹೆಚ್ಚು ಕೇಂದ್ರಗಳನ್ನು ತೆರೆಯುತ್ತಾ ಭೌತಿಕವಾಗಿ ಅಥವ ವಾಣಿಜ್ಯ ರೀತಿಯಲ್ಲಿ ವಿಸ್ತರಿಸುವುದಲ್ಲ. ಆಂತರಿಕ ಮಟ್ಟದಲ್ಲಿ ನಾವು ಮಾಡಬೇಕಾದ ಕೆಲಸ ಬಹಳಷ್ಟಿದೆ.

ಗುರೂಜಿಯವರನ್ನು ಭೇಟಿಯಾಗುವ ಮುನ್ನ ಜೀವನದ ಬಗ್ಗೆ ನನ್ನದೇ ಆದ ಅಭಿಪ್ರಾಯವಿತ್ತು. ಸಹಜವಾಗಿಯೇ ನಮ್ಮಲ್ಲಿ ಅನೇಕರಂತೆ, ಆಧ್ಯಾತ್ಮಿಕತೆಯ ಬಗ್ಗೆ ನನಗೆ ಅನೇಕ ತಪ್ಪು ಅಭಿಪ್ರಾಯಗಳಿತ್ತು. ಉತ್ತಮವಾಗಿ ಬಾಳುವುದನ್ನು ನಮಗೆ ಅಕ್ಷರಶಃ ಕಲಿಸಿದರು. ಅವರ ವಿಚಾರಗಳು ಅತ್ಯುತ್ತಮವಾಗಿದ್ದವು, ಏಕೆಂದರೆ ಅವುಗಳು ಉನ್ನತ ವಿಚಾರಗಳ ಅರಿವನ್ನು, ಉನ್ನತ ಅನುಭವಗಳನ್ನು ಮತ್ತು ಪ್ರೀತಿಯನ್ನು ಆಧರಿಸಿದ್ದವು. ಅವರು ಹೇಳಿದ್ದೆಲ್ಲವನ್ನೂ, ಕಲಿಸಿದ್ದೆಲ್ಲವನ್ನೂ ಅವರ ಬದುಕಿನಲ್ಲಿ ಬಾಳಿದರು.

ಒಂದು ಕಡೆ ಅವರು ನಮಗೆ ಮಹರ್ಷಿ ಅಮರರವರನ್ನು ಮತ್ತು ಋಷಿಗಳನ್ನು ಪರಿಚಯಿಸಿದರು ಹಾಗೂ ಮತ್ತೊಂದು ಕಡೆ ಪಂಡಿತ್ ಭೀಮ್‌ಸೇನ್ ಜೋಷಿಯವರನ್ನು ಪರಿಚಯಿಸಿದರು. ಮೊಜಾರ್ಟ್, ಹಕ್ಸ್ಲೆ ಮತ್ತು ಅನೇಕ ಮಹಾನ್ ಕಲಾಕಾರರನ್ನು ಕೂಡ ಪರಿಚಯಿಸಿದರು. ಅವರನ್ನು ಭೇಟಿಮಾಡಿಲ್ಲದಿದ್ದರೆ ನಾವು ಬಹಳಷ್ಟು ಬದುಕನ್ನು ಕಳೆದುಕೊಳ್ಳುತ್ತಿದ್ದೆವು ಏಕೆಂದರೆ ಜೀವನವನ್ನು ಪೂರ್ಣವಾಗಿ ಬದುಕಲು ನಮಗೆ ತಿಳಿದಿರಲಿಲ್ಲ. ಈಗಲೂ ನಾವು ನಮ್ಮದೇ ಸವಾಲುಗಳನ್ನು ಎದುರಿಸುತ್ತಿರಬಹುದು ಆದರೆ ನಾವು ಪೂರ್ಣ ಬದುಕನ್ನು ಬದುಕುವ ಪ್ರಯತ್ನವನ್ನು ಮಾಡಬಹುದು. ಜೀವನದ ಯಾವುದೇ ಕ್ಷೇತ್ರದ ಸಣ್ಣ ಪುಟ್ಟ ವಿಷಯಗಳಲ್ಲೂ ಮಾರ್ಗದರ್ಶನ ನೀಡಬಲ್ಲ ಗುರೂಜಿಯವರಂಥ ಮತ್ತೊಬ್ಬ ಮಾಸ್ಟರ್ ಇರಬಹುದೇ ಎಂದು ನನಗೆ ತಿಳಿದಿಲ್ಲ.

ಧ್ಯಾನಿಗಳಲ್ಲದ ಜನರು ಅವರನ್ನು ಓದಿ ಅರ್ಥ ಮಾಡಿಕೊಂಡು ಅನುಸರಿಸಿದರೆ, ಅವರೂ ಕೂಡ ಅರ್ಥಪೂರ್ಣವಾದ ಶಾಂತಿಯುತ ಜೀವನವನ್ನು ಬದುಕಬಹುದು. ಋಷಿಗಳ ಸಂಪರ್ಕ, ಅವರದೇ ವಿವೇಕ ಮತ್ತು ದೇವರ ಸಂಪರ್ಕಗಳಿಂದಾಗಿ ಅವರು ಒಂದು ರೀತಿಯ ಅಧಿಕಾರಯುತವಾಗಿ ಜನರನ್ನು ಮಾರ್ಗದರ್ಶಿಸುತ್ತಿದ್ದರು. ಹಾಗಿದ್ದರೂ ಕೆಲವೊಮ್ಮೆ, "ಇದರ ಬಗ್ಗೆ ನನಗೇನು ತಿಳಿದಿಲ್ಲ, ಕ್ಷಮಿಸಿ." ಎಂದು ವಿನೀತರಾಗಿ ಹೇಳುತ್ತಿದ್ದರು.

ನಾವು ಬಾಳುತ್ತಿರುವ ಬದುಕಿಗೆ ಸಂಘರ್ಷಣೆ-ಯಾಗದಿರುವಂತೆ ನಾವು ಕೇಳಬಂದಿರುವ ಉದ್ದೇಶವನ್ನು ವಿವರಿಸಿದ ವ್ಯಕ್ತಿಯೊಬ್ಬರನ್ನು ಎದುರುಗೊಂಡಿದ್ದು ಒಂದು ಸೋಜಿಗವಾಗಿತ್ತು. ಅವರು ನಮ್ಮ ಬಾಳನ್ನು ಉತ್ತಮಗೊಳಿಸಲು ಸಹಾಯಮಾಡಿದರು. ನಮ್ಮ ಬದುಕನ್ನು ನಯಗೊಳಿಸಿದರು. ನಾವು ಚಲನಚಿತ್ರಗಳನ್ನು ಆನಂದಿಸುತ್ತಿದ್ದರೆ, "ನೀವು ಚಲನಚಿತ್ರಗಳನ್ನು ಆನಂದಿಸುವುದನ್ನು ಮುಂದುವರಿಸಿ, ಜೊತೆಗೆ ಈ ಚಿತ್ರಗಳನ್ನೂ ನೋಡಿ," ಎಂದು ಹೇಳುತ್ತಿದ್ದರು. ಬದುಕಿನ ಎಲ್ಲ ವಲಯಗಳಲ್ಲೂ ಪರಿಪೂರ್ಣ ಮಾರ್ಗದರ್ಶನ ನೀಡಿದರು ಮತ್ತು ನಮ್ಮ ಬದುಕನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದರು.

'Thus Spoke Guruji Krishnananda' ಪುಸ್ತಕದ ಎರಡನೆಯ ಭಾಗವನ್ನು ಹೊರತರುವುದಕ್ಕೆ ನಮಗೆ ಸಂತೋಷವಾಗುತ್ತಿದೆ. ಬಹಳ ಜನರ ಪರಿಶ್ರಮದಿಂದಾಗಿ ಈ ಪುಸ್ತಕ ಹೊರಬಂದಿದೆ. ಅವರಲ್ಲಿ ಪ್ರತಿಯೊಬ್ಬರಿಗೂ ನನ್ನ ಕೃತಜ್ಞತೆಗಳು. ಈ ಸಂದರ್ಭದಲ್ಲಿ, ನಮ್ಮ ಕಾರ್ಯಕರ್ತರೆಲ್ಲರಿಗೂ ಕೃತಜ್ಞತೆಯನ್ನು ಹೇಳಲು ಬಯಸುತ್ತೇನೆ. ನಿಜವಾಗಿಯೂ ಬೃಹತ್ತಾದ ಈ ಕೆಲಸವನ್ನು ಮುಂದುವರೆಸಲು ನಿಮ್ಮೆಲ್ಲರ ಸಹಕಾರದಿಂದಾಗಿ ನಮಗೆ ಸಾಧ್ಯವಾಗಿದೆ. ಪ್ರತಿಯೊಬ್ಬರೂ ಪಾಲುಗೊಳ್ಳುವುದು ಬಹು ಮುಖ್ಯ. ಬಹುತೇಕ ಜನರು ಮೌನವಾಗಿ ಕೆಲಸ ಮಾಡಿ ಹಿನ್ನೆಲೆಯಲ್ಲಿಯೇ ಉಳಿಯುತ್ತಾರೆ.

ಋಷಿಗಳ ಈ ಗೌರವಾನ್ವಿತ ಕೆಲಸದಲ್ಲಿ ನಾವೆಲ್ಲರೂ ತೊಡಗಿಕೊಂಡಿದ್ದೇವೆ. ಇದೊಂದು ಮಹತ್ತರವಾದ ವಿಷಯ. ಪ್ರಪಂಚಕ್ಕೆ ಇದು ಕಾಣದಿರಬಹುದು. ಅದು ಮುಖ್ಯವೇನಲ್ಲ. ದೇವರಿಗೆ ಇದು ತಿಳಿದಿದೆ, ಅವನಿದನ್ನು ಗಮನಿಸುತ್ತಾನೆ. ಋಷಿಗಳಿಗೆ ಇದು ತಿಳಿದಿದೆ, ಅವರಿದನ್ನು ಗಮನಿಸುತ್ತಾರೆ. ನಮ್ಮಲ್ಲಿ ಯಾರೊಬ್ಬರೂ ಗುರುತಿಸಿಕೊಳ್ಳುವುದಕ್ಕಾಗಿ ಅಥವ ಪ್ರತಿಫಲಕ್ಕಾಗಿ ಕೆಲಸ ಮಾಡುವುದಿಲ್ಲ. ಗುರೂಜಿಯವರ ಮೇಲಿನ ಪ್ರೀತಿಯಿಂದ ನಾವು ಕೆಲಸಮಾಡುತ್ತೇವೆ. ಗುರೂಜಿಯವರ ಮೇಲಿನ ಪ್ರೀತಿ ಈ ಕೆಲಸವನ್ನು ಮುಂದುವರೆಸಲು ನಮಗೆ ಉತ್ತೇಜನ ನೀಡುತ್ತದೆ. ಈ ಕೆಲಸದಿಂದ ಮತ್ತು ಬಹುಮುಖ್ಯವಾಗಿ ನಮ್ಮ ಬದುಕಿನಿಂದ ಗುರೂಜಿಯವರನ್ನು ಸಂತೋಷಗೊಳಿಸಲು ಸಾಧ್ಯವಾದರೆ ಅದೇ ನಮ್ಮ ಬಹುಮಾನ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು –ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫೀಯು ರೂ. 4500. ಈ ಫೀನಲ್ಲಿ 14% ಸೇವಾ ತೆರಿಗೆ, ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀಯು ರೂ. 3500. ಈ ಫೀನಲ್ಲಿ 14% ಸೇವಾ ತೆರಿಗೆ ಮತ್ತು ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಶ್ರೀ ರಾಘವೇಂದ್ರ ಸೋಮಯಾಜಿಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

“ನಮ್ಮ ವ್ಯಕ್ತಿತ್ವದ ಬಾಹ್ಯಮಟ್ಟದಲ್ಲಿ ಸಿಲುಕಿರುವ ಅರಿವನ್ನು, ಅದರ ಮೂಲಕ್ಕೆ ಅಥವ ಆತ್ಮಕ್ಕೆ ಹಿಂದಿರುಗುವಂತೆ ಮಾಡುವುದಕ್ಕಾಗಿ ಬಿಡುಗಡೆಗೊಳಿಸುವುದು ಹೇಗೆ?” ಎಂದೊಬ್ಬರು ಕೇಳಿದರು. ನಮ್ಮ ಅರಿವು ಮತ್ತು ನಾವು ಬೇರೆ ಎನ್ನುವುದನ್ನು ಈ ಪ್ರಶ್ನೆ ಸೂಚಿಸುತ್ತದೆ. ಆದರೆ ವಾಸ್ತವವೆಂದರೆ ನಾವೇ ಅರಿವು, ಈ ಸಮಯದಲ್ಲಿ ಮೇಲ್ಮೈಯಲ್ಲಿ ನಮ್ಮ ಅರಿವಿದೆ. ಪ್ರಶ್ನೆಯ ಎರಡನೆಯ ಭಾಗವೆಂದರೆ. “ಅರಿವನ್ನು ಅದರ ಮೂಲಕ್ಕೆ ಅಥವ ಆತ್ಮಕ್ಕೆ ಹಿಂದಿರುಗುವಂತೆ ಮಾಡುವುದು ಹೇಗೆ?” ಇದರ ಅರ್ಥ ನಾವು ಆತ್ಮದಿಂದ ಬೇರೆಯಾಗಿದ್ದೇವೆ. ನಾವು, ನಮ್ಮ ಅರಿವು ಮತ್ತು ನಮ್ಮ ಆತ್ಮ, ಇವು ಮೂರು ವಿವಿಧ ವ್ಯಕ್ತಿತ್ವಗಳೆಂದು ಇದು ಸೂಚಿಸುತ್ತದೆ. ಬೇರೆ ರೀತಿಯಲ್ಲಿ ಹೇಳಬೇಕೆಂದರೆ, ನಾವು ಅರಿವನ್ನು ಆತ್ಮಕ್ಕೆ ಹಿಂದಿರುಗಿಸಲು ಬಯಸುತ್ತೇವೆ.

ಇದರ ಬಗ್ಗೆ ಚಿಂತನೆ ಮಾಡಿದರೆ, ‘ನಾವು’ ಎಂದು ಯಾರನ್ನುದ್ದೇಶಿಸಿ ಹೇಳುತ್ತೇವೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ವಾಸ್ತವದಲ್ಲಿ ನಾವು ಅರಿವು, ನಾವು ಆತ್ಮ. ಭಾಷೆಯ ಮಿತಿಯ ಕಾರಣದಿಂದಾಗಿ, ಮೂರು ಪ್ರತ್ಯೇಕ ವ್ಯಕ್ತಿತ್ವಗಳೆಂಬ ವಿಚಾರವನ್ನು ಪರಿಚಯಿಸಲಾಗಿದೆ. ಆದ್ದರಿಂದ ನಾವು ಹೀಗೆ ಹೇಳಬಹುದು – ನನಗೆ, ನಾನು ದೇಹ ಎಂಬ ಅರಿವಿನ ಬದಲಿಗೆ ನಾನು ಆತ್ಮ ಎಂಬ ಅರಿವುಂಟಾಗುವುದು ಹೇಗೆ? ಅದು ಪ್ರಶ್ನೆಗೆ ಮತ್ತು ಪ್ರಶ್ನೆಗೆ ಅಧಾರವಾಗಿರುವ ವಿಚಾರಕ್ಕೆ ಸ್ಪಷ್ಟತೆಯನ್ನು ತರುತ್ತದೆ.

ನಮ್ಮ ಗಮನ ಎಲ್ಲಿದೆಯೋ ಅಲ್ಲಿ ನಮ್ಮ ಅರಿವಿರುತ್ತದೆ. ಒಮ್ಮೆ ಮಹರ್ಷಿ ಅಮರರವರು ಈ ಉದಾಹರಣೆಯನ್ನು ಕೊಟ್ಟಿದ್ದರು. ಅವರು ಹೇಳಿದರು, “ನಿಮ್ಮ ಗಮನವನ್ನು ಹೊರಗಡೆ ಹರಿಸಿ, ಅಲ್ಲಿನ ಎಲ್ಲ ಶಬ್ದಗಳ ಅರಿವು ನಿಮಗುಂಟಾಗುತ್ತದೆ”. ಇದರ ಅರ್ಥ, ನಮ್ಮ ಗಮನವನ್ನು ಅಥವ ನಮ್ಮ ಅರಿವನ್ನು ನಮ್ಮ ಇಚ್ಛಾನುಸಾರ ಬದಲಾಯಿಸುವ ಶಕ್ತಿ ನಮಗಿದೆ. ನಾವು ಈ ಪ್ರಪಂಚದಲ್ಲಿ ಕಾರ್ಯನಿರ್ವಹಿಸುವಾಗ, ನಮ್ಮ ಶಾರೀರಿಕ ವ್ಯವಸ್ಥೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವುದಕ್ಕಾಗಿ, ನಮ್ಮ ಅರಿವು ನಮ್ಮ ಶಾರೀರಿಕ ವ್ಯವಸ್ಥೆಯೊಳಗೇ ಇರುವುದು ಅವಶ್ಯಕ.

ಧ್ಯಾನ ಮಾಡುವಾಗ, ದೇಹ ನಿಶ್ಚಲವಾಗಿ–ರುವುದರಿಂದ ಅದಕ್ಕೆ ನಮ್ಮ ಹೆಚ್ಚು ಗಮನ ಬೇಕಾಗಿಲ್ಲ, ಆದ್ದರಿಂದ ದೇಹದ ಅರಿವಿನ ಅವಶ್ಯಕತೆಯಿಲ್ಲ. ಆದ್ದರಿಂದ ದೇಹಕ್ಕೆ ಗಮನ ಕೊಡದಿರುವಷ್ಟರಿಂದಲೇ ನಮ್ಮ ಅರಿವನ್ನು ದೇಹದಿಂದ ಬಿಡುಗಡೆಗೊಳಿಸಬಹುದು. ನಮ್ಮ ಅರಿವು ನಮ್ಮ ಆಲೊಚನೆಗಳಲ್ಲಿ ಸಿಕ್ಕಿಕೊಂಡಿರುತ್ತದೆ. ನಮಗೆ ಗೊತ್ತಿಲ್ಲದೆಯೇ ನಮ್ಮ ಆಲೋಚನೆಗಳಲ್ಲಿ ನಾವು ಕಳೆದುಹೋಗಿರುತ್ತೇವೆ. ಅಲ್ಲಿ ನಮ್ಮ ಅರಿವು ಏಕೆ ಸಿಕ್ಕಿಕೊಂಡಿದೆ? ನಮ್ಮ ಆಲೋಚನೆಗಳಿಗೆ ನಮ್ಮ ಗಮನ ಕೊಟ್ಟಾಗ ವಾಸ್ತವದಲ್ಲಿ ನಮ್ಮ ಚೈತನ್ಯವನ್ನು ಕೊಟ್ಟು ಅವನ್ನು ಬಲಗೊಳಿಸುತ್ತಿರುತ್ತೇವೆ. ನಮ್ಮ ಆಲೋಚನೆಗಳ ಮೇಲೆ ಆಸಕ್ತಿಯನ್ನು ಕಳೆದುಕೊಂಡಾಗ ಮಾತ್ರವೇ, ಅವುಗಳಿಗೆ ಗಮನ ಕೊಡುವುದನ್ನು ನಿಲ್ಲಿಸುತ್ತೇವೆ. ಆಗ ಇನ್ನೂ ಆಳವಾದುದರ ಅರಿವುಂಟಾಗುತ್ತದೆ ಮತ್ತು ನಿಶ್ಚಲತೆಯ ಅನುಭವವಾಗುತ್ತದೆ. ಈ ಕಾರಣದಿಂದಾಗಿಯೇ ನಿಶ್ಚಲತೆಯ ಅನುಭವಕ್ಕೆ ಅಷ್ಟೊಂದು ಪ್ರಾಮುಖ್ಯತೆ ಕೊಡುತ್ತೇವೆ. ಸಾಧನೆಯಲ್ಲಿ ವೈರಾಗ್ಯಕ್ಕೆ ಅಥವ ನಿರ್ಮೋಹಕ್ಕೆ ಪ್ರಾಮುಖ್ಯತೆ ಕೊಡಲು ಇದೇ ಕಾರಣ. ನಿರ್ಮೋಹವೆಂದರೆ ಯಾವುದೇ ವ್ಯಾಮೋಹ–ವಿಲ್ಲದೆ ಜೀವನವನ್ನು ಪ್ರೀತಿಸುವುದು.

ನಮ್ಮ ಆಲೋಚನೆಗಳು ಮತ್ತು ಚಿಂತೆಗಳಿಂದ ನಮ್ಮ ಅರಿವನ್ನು ಬಿಡಿಸಿಕೊಂಡಾಗ, ನಮಗೆ ಅರಿವಿನ ಅರಿವಾಗುತ್ತದೆ, ಆಗ ಅರಿವು ವಿಸ್ತಾರಗೊಳ್ಳುತ್ತದೆ. ನಾವೇ ಬೆಳಕು, ಪ್ರೀತಿ, ಶಾಂತಿ ಮತ್ತು ನಿಶ್ಚಲತೆಯೆಂಬ ಅರಿವುಂಟಾಗುವುದು ಈ ಹಂತದಲ್ಲಿಯೇ; ನಮ್ಮದೇ ನಿಜ ಅಸ್ತಿತ್ವದ ಅರಿವುಂಟಾಗುತ್ತದೆ. ಆಲೋಚನೆಗಳು ಮಾಯವಾದಾಗ ಆಶ್ಚರ್ಯವೆನಿಸುವಂತೆ ಈ ಪ್ರಪಂಚವೂ ಮಾಯವಾಗಬಹುದು; ಇದ್ದಕ್ಕಿದ್ದ ಹಾಗೆ, ನಾವು ಅನ್ಯಸ್ಥಳದಲ್ಲಿರುವಂತೆ ಅಥವ ನಮ್ಮ ಅಸ್ತಿತ್ವವನ್ನು ಕಳೆದುಕೊಂಡಂತೆ ಅನಿಸಬಹುದು. ಆಲೋಚನಾರಹಿತ ಸ್ಥಿತಿಯಲ್ಲೂ ಅರಿವಿನ ವಿಸ್ತರಣೆ ತಾನಾಗಿಯೇ ಆಗಬೇಕು ಎಂದು ಗುರೂಜಿಯವರು ಹೇಳಿದ್ದರು. ಆದ್ದರಿಂದ, ಈ ಹಂತದಲ್ಲಿ ನಮ್ಮ ಅರಿವನ್ನು ವಿಸ್ತರಿಸಿಕೊಳ್ಳುವ ಯಾವುದೇ ಪ್ರಯತ್ನವನ್ನು ಮಾಡಬಾರದು. ಅದು, ಗುರುವಿನ ಕೃಪೆಯಿಂದ ತಾನಾಗಿಯೇ ಆಗುತ್ತದೆ. ಆದ್ದರಿಂದ ಕೃಪೆಗಾಗಿ ತಾಳ್ಮೆಯಿಂದ ಕಾಯಬೇಕು. ವಿಸ್ತರಣೆಯ ಅನುಭವವಾಗದಿದ್ದಾಗ, ಗುರುವಿಗೆ ನಾವು ಸಂಪೂರ್ಣವಾಗಿ ಶರಣಾಗಲು ನಮಗೆ ಇಷ್ಟವಿಲ್ಲ ಅಥವ ಆಗುತ್ತಿಲ್ಲ ಎಂದು ಅರ್ಥ. ವಿಸ್ತರಣೆ ಆಗಲಿ ಅಥವ ಆಗದಿರಲಿ, ಪ್ರಶ್ನಿಸದೆ ಅಥವ ನಿರಾಶರಾಗದೆ ಅದನ್ನು ಸುಮ್ಮನೆ ಒಪ್ಪಿಕೊಳ್ಳುತ್ತೇವೆ. ಆಗ ನಮ್ಮ ಪ್ರಯತ್ನಗಳು, ಸಂಪೂರ್ಣವಾಗಿ ಶರಣಾಗುವ ಕಡೆಗೆ ಇರುತ್ತದೆ – ಅಂದರೆ ಏನನ್ನೂ ಮಾಡಲು ಪ್ರಯತ್ನಿಸದಿರುವುದು. ಆದ್ದರಿಂದ, ದೇಹ, ಮನಸ್ಸು ಮತ್ತು ಬುದ್ಧಿಗಳನ್ನು ಹತ್ತುವ ಮೆಟ್ಟಲುಗಳಾಗಿ ನಾವು ಬಳಸಿಕೊಂಡು ಅವುಗಳನ್ನು ದಾಟಿ ನಮ್ಮ ನಿಜ ಸ್ವರೂಪವನ್ನು ಅಂದರೆ ನಮ್ಮನ್ನೇ ತಲುಪುತ್ತೇವೆ. ■

## ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ಗುರುವಿನಲ್ಲಿ ಅಚಲವಾದ ನಂಬಿಕೆ ಬೆಳೆಸಿಕೊಳ್ಳಲು ಯಾವುದಾದರೂ ತಂತ್ರವಿದೆಯೇ?**

ಉ: ಜನರು ಏಕೆ ತಂತ್ರಗಳ ಬಗ್ಗೆ ಯೋಚಿಸುತ್ತಾರೆಂದು ನನಗೆ ಆಶ್ಚರ್ಯ-ವಾಗುತ್ತದೆ. ನಿಮಗೆ ಯಾವುದೇ ತಂತ್ರ ಬೇಕಾಗಿಲ್ಲ ಮತ್ತು ಇದಕ್ಕೆ ತಂತ್ರಗಳಿಲ್ಲ. ನೀವು ನಿಜವಾಗಿಯೂ ಅರ್ಥ ಮಾಡಿಕೊಂಡರೆ ಮತ್ತು ಆ ಗುರು ನನ್ನ ಗುರುವಿನಂತೆ ಸರಿಯಾದ ಗುರುವಾಗಿದ್ದರೆ, ಸಹಜವಾಗಿಯೇ ನಿಮ್ಮಲ್ಲಿ ನಂಬಿಕೆ ಬೆಳೆಯುತ್ತದೆ. ಇಲ್ಲಿ ಯಾವ ಟೆಕ್ನಿಕ್ ಇಲ್ಲ.

**ಪ್ರ: ಋಷಿಗಳು ದೀರ್ಘ ತಪಸ್ಸು ಮಾಡುವಾಗ, ಅವರಿಗೂ ನೋವಿನ ಅಥವ ಅಸ್ವಸ್ಥತೆಯ ಅನುಭವ ಆಗುತ್ತದೆಯೇ?**

ಉ: ಇಲ್ಲ. ಋಷಿಗಳೂ ನಮ್ಮಂತೆಯೇ ಎಂದು ನಾವು ಭಾವಿಸುತ್ತೇವೆ. ಋಷಿಗಳು ಸಂಪೂರ್ಣವಾಗಿ ಬೇರೆಯೇ ಆಗಿದ್ದಾರೆ. ಅವರು ಸಾವಿರಾರು ವರ್ಷಗಳವರೆಗೆ ತಪಸ್ಸು ಮಾಡುತ್ತಾರೆ. ಅವರಿಗೆ ಯಾವ ರೀತಿಯ ನೋವು ಅಥವ ಅಸ್ವಸ್ಥತೆಯ ಅನುಭವ ಅಗುವುದಿಲ್ಲ. ಅವರು ಅಭ್ಯಾಸ ಮಾಡುವ ಟೆಕ್ನಿಕ್‌ಗಳು ಬೇರೆ ರೀತಿಯದ್ದಾಗಿರುತ್ತವೆ. ಅವರು ಮಹಾತ್ಮರುಗಳು.

**ಪ್ರ: ಈ ಭೂಮಿಯ ಮೇಲೆ ಋಷಿಗಳು ತಪಸ್ಸು ಮಾಡಬೇಕಾದರೆ, ಅವರು ದೇಹಧಾರಣೆ ಮಾಡಬೇಕೇ?**

ಉ: ಇದರ ಅವಶ್ಯಕತೆ ಇರುವುದಿಲ್ಲ. ಈ ಭೂಮಿಯ ಮೇಲಾಗಲೀ, ಅಥವ ಬೇರೆ ಭೂಮಿಯ ಮೇಲಾಗಲೀ ಅಥವ ಬೇರೆ ಎಲ್ಲಿಯೇ ಆಗಲಿ ಋಷಿಗಳು ಸೂಕ್ಷ್ಮ ದೇಹದಲ್ಲಿ ಧ್ಯಾನ ಮಾಡುತ್ತಾರೆ. ಕೆಲವೊಮ್ಮೆ ಋಷಿಗಳು ನಮ್ಮ ಭೂಮಿಯೊಳಗೆ ಸೂಕ್ಷ್ಮ ದೇಹದಲ್ಲಿ ಪ್ರವೇಶಿಸುತ್ತಾರೆ. ಅಲ್ಲಿ ದೀರ್ಘಾವಧಿಯವರೆಗೆ ಧ್ಯಾನ ಮಾಡುವುದಕ್ಕೆ ಬೇಕಾದಂಥ ಸ್ಥಳಗಳು ಮತ್ತು ಅನುಕೂಲತೆಗಳಿವೆ.

**ಪ್ರ: 1,44,000 ಋಷಿಗಳ ಕಾರ್ಯಕರ್ತರಿಗೆ, ತಾವು ಋಷಿಗಳ ಕೆಲಸ ಮಾಡುತ್ತಿದ್ದೇವೆ ಎಂಬ ಅರಿವು ಈ ಮಟ್ಟದಲ್ಲಿ ಇರುತ್ತದೆಯೇ?**

ಉ: ಅವರಿಗೆ ಅದರ ಅರಿವಿರುತ್ತದೆ, ಆದರೆ ತಾವು ಯಾರು ಎಂಬುದನ್ನು ಅವರು ಬಹಿರಂಗಗೊಳಿಸುವುದಿಲ್ಲ. ಅವರು ಮೌನವಾಗಿ ಕೆಲಸ ಮಾಡುತ್ತಾರೆ. ಅವರು ಹೆಚ್ಚಾಗಿ ಸೂಕ್ಷ್ಮ ಮಟ್ಟದಿಂದ ಕೆಲಸ ಮಾಡುತ್ತಾರೆ. ಪ್ರತಿ ದಿನ ರಾತ್ರಿ ಅವರು ಹಿಮಾಲಯದಲ್ಲಿ ಮೇಲ್ವಿಚಾರಕರಾಗಿರುವ ಋಷಿಗೆ ವರದಿ ಒಪ್ಪಿಸುತ್ತಾರೆ.

**ಪ್ರ: ಪರಬ್ರಹ್ಮ ಲೋಕದಲ್ಲಿ ನಾವು ಆತ್ಮಗಳಾಗಿ ವಾಸವಾಗಿದ್ದೆವು. ನಂತರದಲ್ಲಿ ದೈವೀ ಬ್ರಹ್ಮಾಂಡ ಮತ್ತು ಭೌತಿಕ ಬ್ರಹ್ಮಾಂಡಗಳ ಸೃಷ್ಟಿಯಾಯಿತೇ?**

ಉ: ಹೌದು. ಅಲ್ಲಿ ನಾವು ಯಾವಾಗಲೂ ಇದ್ದೆವು. ಆ ನಂತರ ದೇವರು ಇವೆಲ್ಲವುಗಳನ್ನು ಅಭಿವ್ಯಕ್ತಗೊಳಿಸಿದನು, ಮತ್ತು ಕೇವಲ ನಮಗಾಗಿಯೇ ಇವೆಲ್ಲವನ್ನೂ ಸೃಷ್ಟಿ ಮಾಡಿದನು, ನಾವು ಇಲ್ಲಿಗೆ ಬಂದು ಪ್ರತಿಯೊಂದರ ಅನುಭವ ಪಡೆಯಲೆಂದೇ ಸೃಷ್ಟಿಮಾಡಿದನು.

**ಪ್ರ: ನಸು ಗೆಂಪು (pink) ಬಣ್ಣದ ಬೆಳಕಿನ ಮೂಲದ ಬಗ್ಗೆ ನಾವೇಕೆ ತಿಳಿಯಬಾರದು?**

ಉ: ನಾವು ಇದರ ಬಗ್ಗೆ ತಿಳಿಯಬಾರದೆಂದು ಯಾರು ಹೇಳಿದ್ದಾರೆ? ವಿವಿಧ ಬಣ್ಣದ ಚೈತನ್ಯಗಳ ಬಗ್ಗೆ ತಿಳಿದುಕೊಳ್ಳುವುದು ಬಹಳಷ್ಟಿದೆ. ಎಲ್ಲ ಬಣ್ಣಗಳ ಚೈತನ್ಯಗಳೂ ದೇವರಿಂದಲೇ ಬಂದಿವೆ ಎಂದು ತಿಳಿದುಕೊಂಡರೆ ಸದ್ಯಕ್ಕೆ ಸಾಕು.


**ಪ್ರ: ಈ ಮಾರ್ಗದ ಮೂಲ ಬೋಧನೆಗಳು ಯಾವುವು?**

ಉ: ಪ್ರೀತಿ, ಶುದ್ಧತೆ, ಪ್ರಾಮಾಣಿಕತೆ ಮತ್ತು ಶಾಂತಿಯನ್ನು ಅಭಿವ್ಯಕ್ತಗೊಳಿಸುವುದು. ಜೀವ ಶಕ್ತಿಯನ್ನು ಅಭಿವ್ಯಕ್ತಗೊಳಿಸುವುದು. ಇದು ಬಹಳ ಮುಖ್ಯ. ಧ್ಯಾನಮಾಡಿ ಮತ್ತು ನಿಮ್ಮ ಭಾವನೆಗಳು ಮತ್ತು ಆಲೋಚನೆಗಳನ್ನು ಸಕಾರಾತ್ಮಗೊಳಿಸಿ. ಅಧ್ಯಾತ್ಮಿಕ ಮತ್ತು ಲೌಕಿಕ ಜೀವನಗಳ ನಡುವೆ ಸಮತೋಲನವಿರಲಿ. ನಾವು ಹೊಸ ಯುಗವನ್ನು ಪ್ರವೇಶಿಸುತ್ತಿದ್ದೇವೆ, ಪರಿವರ್ತನಾ ಸಮಯದಲ್ಲಿದ್ದೇವೆ ಎಂಬಂತಹ ಕೆಲವು ವಾಸ್ತವಗಳ ಅರಿವಿರಲಿ. ಇವುಗಳನ್ನು ಎದುರಿಸಲು ನಾವು ಆಧ್ಯಾತ್ಮಿಕವಾಗಿ ಸಿದ್ಧಗೊಳ್ಳಬೇಕು, ಬೇರೆ ರೀತಿಯಲ್ಲಲ್ಲ. ಇದು ಬಹಳ ಮುಖ್ಯ. ನಮ್ಮ ಮೂಲ ಬೆಳಕು, ನಮ್ಮ ಮಾರ್ಗ ಬೆಳಕು, ನಮ್ಮ ಗುರಿ ಬೆಳಕು. ನಾವು ಬೆಳಕಿನ ಬಗ್ಗೆ ಎಲ್ಲವನ್ನೂ ತಿಳಿದುಕೊಳ್ಳಬೇಕು ಮತ್ತು ಬೆಳಕಿನ ಅನುಭವ ಪಡೆಯಬೇಕು. ಬೇರೆ ಪ್ರಪಂಚಗಳಲ್ಲಿ, ಸೂಕ್ಷ್ಮ ಜಗತ್ತುಗಳಲ್ಲಿ ಋಷಿಗಳಿದ್ದಾರೆ. ನಮ್ಮನ್ನು ಮಾರ್ಗದರ್ಶಿಸಲು ಮತ್ತು ಎಲ್ಲ ರೀತಿಯಲ್ಲಿ ಸಹಾಯಮಾಡಲು ಅವರು ಯಾವಾಗಲೂ ಸಿದ್ಧರಿದ್ದಾರೆ. ಋಷಿಗಳ ಜೊತೆ ನಾವು ಸಂಪರ್ಕವನ್ನು ಸ್ಥಾಪಿಸಬೇಕು, ಇದು ಪ್ರತಿಯೊಬ್ಬರಿಗೂ ಸಾಧ್ಯವಿದೆ. ನಮ್ಮ ಕರ್ಮಗಳನ್ನು ತೀರಿಸಿಕೊಳ್ಳಲು ನಾವು ಮತ್ತೆ ಪುನರ್ಜನ್ಮ ಪಡೆಯುತ್ತೇವೆ. ನಾವು ಈ ಭೂಮಿಗೆ ಬಂದಿರುವುದು ಇಲ್ಲಿಯ ಅನುಭವ ಪಡೆಯಲೆಂದು. ಸಾಕಷ್ಟು ಅನುಭವ ಪಡೆದ ನಂತರ ನಾವು ಮತ್ತೆ ಹಿಂದಿರುಗಬೇಕು. ನಮ್ಮ ಮೂಲ ಸ್ಥಳಕ್ಕೆ ಹಿಂದಿರುಗುವುದು ನಮ್ಮ ಆಧ್ಯಾತ್ಮಿಕ ಗುರಿ. ಈ ಭೂಮಿಯ ಮೇಲಿರುವ ಮಾನವರೆಲ್ಲರೂ ಒಂದೇ. ಪ್ರತಿಯೊಬ್ಬರ ಯೋಗಕ್ಷೇಮಕ್ಕಾಗಿ, ವೈಯಕ್ತಿಕವಾಗಿ ನಾವೆಲ್ಲರೂ ಜವಾಬ್ದಾರರು. ಬೇರೆಯವರಿಗೆ ಸಂಭವಿಸುವ ಘಟನೆಗಳು ನಮ್ಮ ಮೇಲೂ ಪರಿಣಾಮ ಬೀರುತ್ತವೆ. ಜವಾಬ್ದಾರಿಗಳನ್ನು ನಾವೇ ವಹಿಸಿಕೊಳ್ಳಬೇಕಾಗುತ್ತದೆ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 | 200/- |
| Thus Spoke Guruji Krishnananda - Vol 2 | 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು-ಶಿಷ್ಯರ ಸಂಭಾಷಣೆ | 60/- |
| ಐ-ಗುರೂಜಿ ಭಾಗ 1 | 150/- |
| ಐ-ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु-शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூக்ஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KARN/BGE/1124/ 2017-2019
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಕೆಲ ದಿನಗಳ ಹಿಂದೆ, ನಾನು ಧ್ಯಾನ ಮಾಡುವಾಗ, "ನಾನು ಭಯರಹಿತನಾಗಿರುವೆ" ಎಂಬ ಆಲೋಚನೆ ಬಂತು. ಈ ಆಲೋಚನೆ ಪದೇ ಪದೇ ಬರುತ್ತಿತ್ತು. ನಂತರ "ಭಾಗವತ" ಪುಸ್ತಕವನ್ನು ಓದುತ್ತಿರುವಾಗ "ನಾನು ಸಾವಿನ ಭಯದಿಂದ ದೂರವಾಗಿದ್ದೇನೆ" ಎಂಬುದನ್ನು ಈ ಪುಸ್ತಕ ಸ್ಪಷ್ಟವಾಗಿ ಅರ್ಥ ಮಾಡಿಸಿತು. ಈಗ ನಾನು ಧ್ಯಾನದಲ್ಲಿ ಪದಗಳಿಂದ ವರ್ಣಿಸಲಾಗದ ಸಂತೋಷ ಮತ್ತು ಆನಂದದ ಅನುಭವವನ್ನು ಪಡೆಯುತ್ತಿದ್ದೇನೆ. ಧ್ಯಾನದ ಗುಣ ಮಟ್ಟವು ಸಹ ಉತ್ತಮ ಮಟ್ಟಕ್ಕೇರಿದೆ.

– ಸೀತಾರಾಮ್ ಪುರಾಣಿಕ್

ನನ್ನ ಆಫೀಸಿನ ಸಂದರ್ಶಕರ ಕೊಠಡಿಯಲ್ಲಿ ನನ್ನ ಕೈ ಗಡಿಯಾರವನ್ನು ಮರೆತು ಬಂದಿದ್ದು, ಎರಡು ದಿನ ಹುಡುಕಿದರೂ ಅದು ಸಿಗಲಿಲ್ಲ. ನಾನು ಗುರೂಜಿಯವರ ಜೊತೆ ಮಾತನಾಡಿ ಸಹಾಯಕ್ಕಾಗಿ ಪ್ರಾರ್ಥಿಸಿದೆ. ಬೆಳಕಿನ ಮಾರ್ಗದರ್ಶನದಂತೆ ನಡೆದುಕೊಂಡಾಗ ಕೆಲವೇ ನಿಮಿಷಗಳಲ್ಲಿ ನನ್ನ ಅಚ್ಚು ಮೆಚ್ಚಿನ ಗಡಿಯಾರ ಸಿಕ್ಕಿತು. ಇದೆಲ್ಲ ಗುರೂಜಿಯವರ ಅನುಗ್ರಹ, ಇದು ನಮಗೆ ಅವಶ್ಯವಾಗಿರುವುದನ್ನೆಲ್ಲ ಕೊಟ್ಟು ನಮ್ಮ ಜೀವನವನ್ನು ಅರ್ಥಪೂರ್ಣವನ್ನಾಗಿಸಿದೆ. ಅವರಿಗೆ ನಾನು ಚಿರ ಋಣಿ.

– ಪುಷ್ಕರ್ ಪಟ್ಕಿ

ಜನ ದಟ್ಟಣೆಯ ಕಾರಣದಿಂದ ನಾನು ರೈಲ್ವೆ ನಿಲ್ದಾಣವನ್ನು ತಲುಪುವುದು ತಡವಾಗುತ್ತಿತ್ತು. ನಾನು ಪ್ರಯಾಣಿಸಬೇಕಾಗಿದ್ದ ರೈಲು ತಪ್ಪಿ ಹೋದೀತೆಂಬ ಆತಂಕದಿಂದ ಗುರೂಜಿಯವರನ್ನು ಪ್ರಾರ್ಥಿಸಿದೆ. ಮುಂದಿನ ರೈಲು ಒಂದು ಗಂಟೆಯ ನಂತರವೇ ಇದ್ದದ್ದು. ಗುರೂಜಿಯವರ ಅನುಗ್ರಹದಿಂದ, ಆಶ್ಚರ್ಯವೆನಿಸುವಂತೆ ಆ ರೈಲು ಕೆಲವು ನಿಮಿಷಗಳು ತಡವಾಗಿ ಬಂದು ನನ್ನ ಪ್ರಯಾಣಕ್ಕೆ ಅನುಕೂಲ ಮಾಡಿಕೊಟ್ಟಿತು.

ನನ್ನ ಕೆಲಸದ ನಿಗದಿತ ಸೇವಾ ಅವಧಿಯು ಅಂತ್ಯಗೊಳ್ಳುವುದರಲ್ಲಿತ್ತು. ಇದಕ್ಕಾಗಿ ನಾನು ಋಷಿಗಳಿಗೆ ಈ ಸೇವಾ ಅವಧಿವನ್ನು ಮೇ ತಿಂಗಳವರೆಗೂ ವಿಸ್ತರಿಸಬೇಕೆಂದು ಪ್ರಾರ್ಥಿಸಿದೆ. ಅವರ ಅನುಗ್ರಹದಿಂದ ನನ್ನ ಕೆಲಸದ ಅವಧಿ ವಿಸ್ತರಿಸಲ್ಪಟ್ಟಿತು.

– ಗಾಯತ್ರಿ ಅಂಬಾಡಿ ಭಾಟಿಯ

ಪ್ರತಿ ದಿನವೂ ಗುರೂಜಿಯವರ ಹಾಗೂ ಋಷಿಗಳ ಅನುಗ್ರಹದಿಂದ ತುಂಬಿರುತ್ತದೆ. ಈ ಅನುಗ್ರಹವನ್ನು ಹಿಂದೆ ಅನೇಕ ಸಲ ಸದುಪಯೋಗ ಪಡೆದು-ಕೊಳ್ಳುವುದಕ್ಕೆ ಸಾಧ್ಯವಾಗದೇ ಕಳೆದುಕೊಂಡಿದ್ದೂ ಇದೆ. ನಿಮ್ಮ ಪ್ರೀತಿಯ ಮಾರ್ಗದರ್ಶನಕ್ಕೆ ನನ್ನ ವಂದನೆಗಳು.

– ನಂದಿತ ವಿಜಯನ್

ಗುರೂಜಿಯವರ ಹೊಸ ಪುಸ್ತಕವನ್ನು ಓದಿದ ನಂತರ, ನನಗೆ ಧ್ಯಾನದ ಮಹತ್ವದ ಅರಿವಾಯಿತು. ಧ್ಯಾನ ಮಾಡಲಾಗದಿದ್ದ ದಿನಗಳಲ್ಲಿ ಭಾವನೆಗಳನ್ನು ನಿರ್ವಹಿಸುವುದಕ್ಕೆ ಕಷ್ಟವಾಗುತ್ತದೆ. ಧ್ಯಾನ ಮಾಡಿದ ದಿನಗಳಲ್ಲಿ ಎಂಥಹ ಕಠಿಣ ಸಂದರ್ಭಗಳನ್ನು ಎದುರಿಸಲೂ ನನಗೆ ಸಾಧ್ಯವಾಗುತ್ತದೆ. ನನ್ನೊಳಗೆ ಪ್ರಶಾಂತತೆ ಮತ್ತು ಸಮಾಧಾನ ತುಂಬಿದೆ. ದೇವರ ಕೃಪೆ ಮತ್ತು ಋಷಿಗಳ ಮಾರ್ಗದರ್ಶನದಿಂದ ನಿಜವಾಗಿಯೂ ಜೀವನ ಅತ್ಯಂತ ಸುಂದರವಾಗಿದೆ, ಎಂದು ಸಂತೋಷದಿಂದ ಹೇಳುತ್ತೇನೆ.

– ಪ್ರತಿಮಾ ವಡಗಾಮ

ಇತ್ತೀಚಿಗೆ ಸಂಕಷ್ಟಗಳು, ಆರ್ಥಿಕ ನಷ್ಟಗಳು ಮತ್ತು ಸವಾಲಿನ ಸನ್ನಿವೇಶಗಳು ಎದುರಾದವು. ಇಷ್ಟೆಲ್ಲ ತೊಂದರೆಗಳ ನಡುವೆಯೂ, ಅಂತರಾಳದಲ್ಲಿ ನಾನು ಸಮಾಧಾನದಿಂದಿದ್ದೇನೆ. ಇರುವ ಒಂದೇ ದಾರಿಯೆಂದರೆ ಬೆಳಕಿನೊಡನೆ ಇರುವುದು ಮತ್ತು ಅದೇ ಅತ್ಯುತ್ತಮ ದಾರಿ ಎಂದು ನನಗೆ ಗೊತ್ತಿದೆ. ನಾನು ಬೆಳಕಿನ ಭಾಗವಾಗಿದ್ದೇನೆ, ಈಗ ಪ್ರತಿಯೊಂದನ್ನು ನಾನು ಪ್ರೇಕ್ಷಕಳಂತೆ ನೋಡುತ್ತಿದ್ದೇನೆಯೇ ಹೊರತು ಅದರಲ್ಲಿ ಭಾಗಿಯಾಗಿ ಅಲ್ಲ. ಫಲದಾಯಕ ಮತ್ತು ಅರ್ಥಪೂರ್ಣ ಜೀವನ ನಡೆಸುವುದಕ್ಕಾಗಿ, ಎಲ್ಲ ಸಮಸ್ಯೆಗಳಿಂದ ಹೊರ ಬರಬೇಕೆಂದು ಬಯಸುತ್ತೇನೆ. ಗುರೂಜಿ, ಋಷಿಗಳು ಮತ್ತು ಬೆಳಕು ಎಂದೆಂದಿಗೂ ನನ್ನ ಜೀವನಾಧಾರವಾಗಿರಲಿ.

– ಮೈತ್ರೇಯಿ ಶಶಾಂಕ್

ನಾನು ಧ್ಯಾನ ಮಾಡುವಾಗ ಋಷಿಗಳು ಬಂದು ನನ್ನ ನೀಲಿ ರಕ್ಷಾ ಕವಚದೊಂದಿಗೆ ಸೇರುವುದನ್ನು ನೋಡುತ್ತೇನೆ. ಅವರು ನನ್ನನ್ನು ಸುತ್ತುವರಿಯುತ್ತಾರೆ, ಆಗ ನನಗೆ ಅವರ ಇರುವಿಕೆಯ ಅನುಭವವಾಗುತ್ತದೆ.

– ಲುಸಿಂಡಾ ಬಾಷ್

ಕೆಲವೊಮ್ಮೆ ನನ್ನೊಳಗೆ ಖಾಲಿ ಪ್ರದೇಶವನ್ನು ಗಮನಿಸುತ್ತೇನೆ. ಈ ಸ್ಥಳ ಬಹಳ ದೊಡ್ಡದಾಗಿದ್ದು, ಪ್ರಖರ ಬೆಳಕಿನಿಂದ ತುಂಬಿದೆ. ಈ ಸ್ಥಳದೊಂದಿಗೆ ನಾನು ಒಂದಾಗಿದ್ದೇನೆ ಎಂಬ ಅನುಭವವಾಗುತ್ತದೆ.

– ಸಂಜಯ ಮನೋಹರ್

ಫೆಬ್ರವರಿ ಹನ್ನೊಂದರಂದು ಇದ್ದ ಚಂದ್ರ ಗ್ರಹಣವನ್ನು ಮರೆತಿದ್ದೆ. ನಿದ್ರೆಯಲ್ಲಿ ಯಾರೋ ನನ್ನನ್ನು ತಟ್ಟಿ ಎಚ್ಚರಿಸಿದಂತೆ ಅನುಭವವಾಯಿತು. ತಕ್ಷಣ ಎಚ್ಚರಗೊಂಡು ಕಿಟಕಿಯಿಂದ ಆಚೆ ನೋಡಿದಾಗ ಚಂದ್ರನ ದರ್ಶನವಾಯಿತು. ಆಗ ಬೆಳಗಿನ ಜಾವ 4.30ರ ಸಮಯ. ಗ್ರಹಣದ ನೆನಪಾಗಿ ತಕ್ಷಣವೇ ಎದ್ದು ಧ್ಯಾನಕ್ಕೆ ಕುಳಿತೆ. ಧ್ಯಾನದ ಪೂರ್ತಿ ಸಮಯ ಆಕಾಶದಿಂದ ಚೈತನ್ಯಗಳ ಸುರಿಮಳೆಯಾದಂತೆ ಅನುಭವವಾಯಿತು. ನನ್ನ ದೇಹ ಹಗುರವಾದಂತೆ ಹಿತವೆನಿಸಿತು. ಇಂಥ ಅನುಭವಗಳನ್ನು ನೀಡಿದ ಋಷಿಗಳಿಗೆ ಮತ್ತು ಗುರೂಜಿಯವರಿಗೆ ನಾನು ಕೃತಜ್ಞಳಾಗಿದ್ದೇನೆ.

– ಸರೋಜ್ ಸಾವ್ಲೆ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ